Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ತಾರೀಕು ೬-೧-೧೯೫೦ನೇ ಪಕ್ರವಾರ | ಸಂಚಿಕೆ ೩೨

ಮೊದಲನೇ ರಾಷ್ಟ್ರಾಧ್ಯಕ್ಷರು ಯಾರು?

ಲೇ:- "ಗುಪ್ತ"

ಜನವರಿ ತಾರೀಕು ೨೬ ಹತ್ತಿರ ಬರುತ್ತಿದೆ. ಆ ದಿನದಲ್ಲಿ ಭಾರತವನ್ನು ರಿಪಬ್ಲಿಕ್ ಎಂದು ಸಾರಲಾಗುವದು. ಆ ದಿನದಲ್ಲಿ ಇಂದಿರುವ ಗವರ್ನರ್ ಜನರಲರಿಂದ ತಾರೀಕು ೨೫ ರಲ್ಲಿ ಚುನಾಯಿತರಾಗುವ ಪ್ರೆಸಿಡೆಂಟರು ಜವಾಬ್ದಾರಿಯನ್ನು ವಹಿಸಿಕೊಳ್ಳುವರು. ತಾರೀಕು ೨೫ ರಲ್ಲಿ ಈ ಆಯ್ಕೆ ಆಗಲಿದೆ. ಭಾರತದ ಪ್ರಥಮ ಅಧ್ಯಕ್ಷತನದ ಹೂಮಾಲೆ ಯಾರ ಕೊರಳಿಗೆ ಬೀಳುವದೋ ಎಂದು ಎಲ್ಲರು ಕಾತುರರಾಗಿದ್ದಾರೆ.

ಅಧ್ಯಕ್ಷರ ಆಯ್ಕೆಯು ಈ ಓಟಿನಲ್ಲಿ ನಾಲ್ಕಾರು ಹೆಸರುಗಳು ಕಂಡುಬರುತ್ತಿವೆ. ರಾಜೇಂದ್ರ ಪ್ರಸಾದರೇ, ರಾಜಗೋಪಾಲಾಚಾರಿಯವರೇ, ಸರ್ದಾರ್ ಪಟೇಲರೇ, ನೆಹರೂರವರೇ ಕಡೆಗೆ ಅಂಬೇಡ್ಕರರೇ ಯಾರು ಅಧ್ಯಕ್ಷರಾಗಬಹುದೆಂಬುದು ಇನ್ನು ನಿರ್ಧಾರ ಆಗಬೇಕು.

ರಾಜೇಂದ್ರಪ್ರಸಾದ.

ಭಾರತ ರಾಜ್ಯಘಟನಾ ಸಮಿತಿಯ ಅಧ್ಯಕ್ಷ ಪದವನ್ನು ಕಳೆದ ಎರಡು ವರ್ಷಗಳಿಂದ ವಹಿಸಿ ಅತೀ ದಕ್ಷತೆಯಿಂದ ಇದನ್ನು ನಿರ್ವಹಿಸಿ ಸಕಲರ ಜನಾನುರಾಗಕ್ಕೆ ಪಾತ್ರರಾದ ರಾಜೇಂದ್ರರು ಭಾರತದಲ್ಲಿ ಅಜಾತಶತ್ರುಗಳೆನ್ನಬಹುದು. ಅವರಿಗೆ ವಿರೋಧಿಗಳೆನ್ನುವವರಿಲ್ಲ. ಮಹಾತ್ಮಾ ಗಾಂಧೀಜಿಯವರ ನಂತರ ಅವರ ತತ್ವಗಳ ಪ್ರಮುಖ ಪಾಲಕರಾಗಿ ಆ ಪಥದಲ್ಲಿ ಮುಂದೆ ಸಾಗುತ್ತಿರುವ ಧುರೀಣರಲ್ಲಿ ಅಗ್ರಗಣ್ಯರಿವರು. ಭಾರತ ರಾಜ್ಯಘಟನಾ ಸಭೆಯ ಅಧ್ಯಕ್ಷತೆ ವಹಿಸಿ ಭಾರತಕ್ಕೆ ನವಘಟನೆಯನ್ನು ರೂಪಿಸಿಕೊಟ್ಟ ಇವರು ಭಾರತದ ಪ್ರಥಮ ಅಧ್ಯಕ್ಷರಾಗುವದು ಸಾಕ್ಷತ್ ಇದೆ. ಆದನ್ನು ಅವರು ಯೋಗ್ಯರೀತಿ ನಿರ್ವಹಿಸುವರೆಂದೂ ಬೇರೆ ಹೇಳಬೇಕಿಲ್ಲ. ಆದರೆ ಅವರು ಆ ಜವಾಬ್ದಾರಿಯನ್ನು ಹೊತ್ತುಕೊಳ್ಳುವರೋ ನೋಡಬೇಕಿದೆ. ಆರೋಗ್ಯ ಕಾರಣಗಳಿಂದ ನಿಧಾನಗತಿಯವರು ಬಹುಶಃ ಒಪ್ಪದಿರಬಹುದು. ಇಂದು ನಮ್ಮ ದೇಶದಲ್ಲಿ ಹಿರಿಯರಷ್ಟು ಅನಾಸಕ್ತ ವೈರಾಗಿಗಳು ಬೇರಿಲ್ಲ. ಅವರು ಈ ವರೆಗೆ ಯಾವದೇ ಅಧಿಕಾರಕ್ಕಾಗಲೀ, ಹಿರಿಮೆಗಾಗಲೀ ಇಚ್ಛೆಪಟ್ಟವರಲ್ಲ. ದೇಶವೇ ಅವರನ್ನು ಕರೆದು ಗೌರವಿಸಿದೆ. ಈ ಸಾರಿಯೂ ಹಾಗೆ ಆಗಬಹುದು. ಇತೀ ದೇಶ ಅವರ ಆಯ್ಕೆಯನ್ನು ಬಯಸಿದರೆ ಅವರು ಜವಾಬ್ದಾರಿಯನ್ನು ಹೊರಲು ತಯಾರಾದಾರು. ಇಂದಿನ ಪರಿಸ್ಥಿತಿಯಲ್ಲಿ ಅವರೇ ಅಧ್ಯಕ್ಷರಾಗುವ ಸಂಭವ ಹೆಚ್ಚಿದೆ.

ರಾಜಗೋಪಾಲಾಚಾರಿ.

ಘಟನಾತ್ಮಕ ಗವರ್ನರ್ ಜನರಲ್ ಆಗಿರುವ ರಾಜಾಜಿಯವರು ಭಾರತ ಅಧ್ಯಕ್ಷ ಪದಕ್ಕೆ ಯೋಗ್ಯರೆಂದು ಬೇರೆ ಹೇಳಬೇಕಿಲ್ಲ. ರಾಜನೀತಿಯಲ್ಲಿ ಅವರಷ್ಟು ಸರಿಗಟ್ಟುವವರು ಭಾರತದಲ್ಲಿ ಬೇರಾರೂ ಇಲ್ಲ. ರಾಜಾಜಿಯನ್ನು ಭಾರತದ ಪ್ರಥಮ ಪ್ರೆಸಿಡೆಂಟರಾಗಿ ಆರಿಸಬಹುದೇ ಎಂಬ ಸಂಶಯ ಇದೆ. ಆವರು ಗವರ್ನರ್ ಜನರಲರಾಗಿ ಮಾಡಿದ ಕೆಲಸವನ್ನು ಪಂಡಿತ ನೆಹರೂರಂಥವರೇ ಹೊಗಳಿದ್ದಾರೆ ಸಹಜ. ಆಪರೆ ಭಾರತದ ಪ್ರಥಮ ಪ್ರೆಸಿಡೆಂಟ್‌ತನವು ದಕ್ಷಿಣ ಭಾರತದವರಿಗೆ ದೊರಕುವದೇ ಎಂಬ ಶಂಕೆ ಇದೆ. ಏಕೆಂದರೆ ದಕ್ಷಿಣದವರ ವರ್ಚಸ್ಸನ್ನು ಅಸೂಯೆಯಿಂದ ಉತ್ತರದವರು ನೋಡುತ್ತಿರುವದನ್ನು ತಿಳಿದುಕೊಳ್ಳಲು ಹೆಚ್ಚಿನ ಪ್ರಯಾಸಪಡಬೇಕಿಲ್ಲ.

ರಾಜಾಜಿಯವರು ತಾನು ರಾಜಕಾರಣದಿಂದ ನಿವೃತ್ತಿ ಹೊಂದುವದಾಗಿಯೂ ಅಧ್ಯಕ್ಷರ ಆಯ್ಕೆಯಲ್ಲಿ ತಾನು ಕಂಟಕವಾಗಬಾರದೆಂದೂ ಹೇಳಿದ್ದಾರೆ. ಅವರ ಈ ವೈರಾಗ್ಯ ಅವರ ರಾಜನೀತಿಯಷ್ಟೇ ಸೂಕ್ಷ್ಮವಾದುದು!

ಸರ್ದಾರ ಪಟೇಲರು.

ಕೆಲವರು ಸರ್ದಾರರ ಹೆಸರನ್ನು ಹೇಳುತ್ತಿದ್ದಾರೆ. ಈ ವರೆಗೆ ಗೃಹಶಾಖೆಯ ಜವಾಬ್ದಾರಿಯನ್ನು ಹೊತ್ತು ವಿಶ್ರಾಂತಿ ಇಲ್ಲದೆ ದುಡಿಯುತ್ತಿರುವ ಇವರು ಆಗಾಗ್ಗೆ ಕಾಯಿಲೆ ಬೀಳುತ್ತಿದ್ದಾರೆ. ಆದ್ದರಿಂದ ಅವರ ಹೆಗಲಿನ ಮೇಲಿರುವ ಮಹಾಭಾರವನ್ನು ತೆಗೆದು ಅವರಿಗೆ ರಾಷ್ಟ್ರಾಧ್ಯಕ್ಷ ಸ್ಥಾನದ ಗೌರವ ಕೊಡುವದು ಉಚಿತವೆಂದು ಹೇಳಲಾಗುತ್ತಿದೆ. ಆದರೆ ಸರ್ದಾರ್ ಪಟೇಲರಂಥಾ ಕ್ರೀಯಾತ್ಮಕ ವ್ಯಕ್ತಿಯನ್ನು ಪ್ರೆಸಿಡೆಂಟರಾಗಿ ಕೂಡುವದು ಭಾರತದ ದೃಷ್ಟಿಯಿಂದ ಹಾನಿಕಾರಕವಾದುದು. ಇಂದಿನ ಪರಿಸ್ಥಿತಿಯಲ್ಲಿ ಸರ್ಕಾರದ ಕಡಿವಾಣ ಹಿಡಿಯು ಮುನ್ನಡೆಸಲು ಅವರು ಅತೀ ಅವಶ್ಯ. ಆದ್ದರಿಂದ ರಾಷ್ಟ್ರಾಧ್ಯಕ್ಷ ಪಟ್ಟವನ್ನು ಅವರಿಗೆ ಕಟ್ಟಿದರೆ ವಿಪರೀತ ಹಾನಿ ಇದೆ.

ನೆಹರೂರವರು.

ಭಾರತದ ಪ್ರಧಾನಮಂತ್ರಿ ನೆಹರೂರವರೇ ಇಂದಿನ ಪರಿಸ್ಥಿತಿಯಲ್ಲಿ ನೆಹರೂರವರು ಹಿಂದಿನಂತಲ್ಲದೆ ಸ್ವೇಚ್ಛಾತ್ಮಕ ಧೋರಣೆಯಿಂದ ಕಾರ್ಯರಂಗದಲ್ಲಿ ಆಸಕ್ತಿ ಇರುವವರು. ಅವರು ಗಂಭೀರವಾಗಿ ಗಂಡಾಂತರವನ್ನು ಎದುರಿಸಿ ಹಿರುಗುವ ಜನವಲ್ಲದೆ ವೈದಾನದ ಜೀವನದ ಆಶೆಯುವರಲ್ಲ. ಆದ್ದರಿಂದ ನವಚೇತನದ ಈ ವ್ಯಕ್ತಿ ರಾಷ್ಟ್ರಾಧ್ಯಕ್ಷ ಪದವಿಯನ್ನು ಪಡೆದು ಅಲಂಕಾರದ ಮೂರ್ತಿಯಾಗಲು ಖಂಡಿತಾ ಒಪ್ಪರು. ಒಂದು ವೇಳೆ ಅವರನ್ನು ಒಪ್ಪಿಸಿದರೂ ಭಾರತದ ಜವಾಬ್ದಾರಿಯನ್ನು ನಿರ್ವಹಿಸಲು ಸರ್ವ ಜನಾನುರಾಗವನ್ನು ಪಡೆದ ವ್ಯಕ್ತಿ ಬೇರಿದ್ದಾರೆ! ಅವರು ಮಂತ್ರಿ ಮಂಡಲದಿಂದ ಹೊರಗೆ ನಿಂತರೆ ಮಂತ್ರಿ ಮಂಡಳದ ಪ್ರತಿಷ್ಠೆಯು ಕೆಳಗಿಳಿಯುವದಲ್ಲದೆ ಕಾಳಗವು ಕಣವಾಗಲೂಬಹುದು. ಆದ್ದರಿಂದ ಪಂಡಿತ ಜವಾಹರರು ಈ ನೌಕರಿಕ್ಕೆ ಎಂದೂ ಒಪ್ಪಲಾರರು. ಹಾಗೆ ಒಪ್ಪಿದರೆ ರಾಷ್ಟ್ರಕ್ಕಾಗುವ ಹಾನಿಯು ಕಲ್ಪನೆ ಆವರಿಗಿದೆ!

ಡಾ ಅಂಬೇಡ್ಕರ್.

ಈ ಅಧ್ಯಕ್ಷ ಆಯ್ಕೆಯು ಓಟಿದ ಪಟ್ಟಿಯಲ್ಲಿ ಇವರ ಹೆಸರು ಕಂಡು ಬರುತ್ತಿದೆಯಾದರು ಈ ಸೂಚನೆ ಅಂಗೀಕರಿಸಲ್ಪಟ್ಟೀತೆಂದು ಹೇಳಲಾಗುವದಿಲ್ಲ. ಒಂದು ವೇಳೆ ಇವರನ್ನು ಅಧ್ಯಕ್ಷರಾಗಿ ಆರಿಸಿದರೆ ಭಾರತದ ಹರಿಜನ ವರ್ಗದ ಬೆಂಬಲವು ಮುಂದೆ ಚುನಾವಣೆಯಲ್ಲಿ ತಮಗೆ ದೊರೆಯಬೇಕೆಂಬ ಕಾಂಗ್ರೆಸ್ಸಿಯಿಂದ ಕಾಂಗ್ರೆಸ್ಸು ಹೀಗೆ ಮಾಡಿದೆ ಎಂದು ಎಡಪಕ್ಷದವರು ಹೇಳಿದರೆ ಅದನ್ನು ಸುಳ್ಳೆನ್ನಲಾಗುವದಿಲ್ಲ. ಮಹಾತ್ಮರು ಸ್ವತಂತ್ರ ಭಾರತದ ಪ್ರಥಮ ಅಧ್ಯಕ್ಷಸ್ಥಾನ ವಯೋಗ್ಯ ಹರಿಜನ ಬಾಲಕಿಯೊಬ್ಬಳಿಗೆ ಕೊಡಲ್ಪಟ್ಟರೆ ಅದರಿಂದ ನನಗೆ ಅಮಿತಾನಂದವಾದೀತೆಂಬ ಕನಸುಕಟ್ಟಿದ್ದರು. ಇಂದು ಅಂಬೇಡ್ಕರರ ವಿಚಾರವಾಗಿ ಅದೇ ಮಾತನ್ನು ಅನೇಕರು ಹೇಳುತ್ತಾರೆ. ಅವರನ್ನು ಅಧ್ಯಕ್ಷರಾಗಿ ಮಾಡಿದರೆ ಮಹಾತ್ಮರ ಆತ್ಮಕ್ಕೆ ಶಾಂತಿದೊರೆಯಬಹುದೆನ್ನುತ್ತಾರೆ. ಇವೆಲ್ಲ ತೋರಿಕೆಯ ಮಾತೆಂದು ಬೇರೆ ಹೇಳಬೇಕಿಲ್ಲ. ಗಾಂಧೀಜಿಯ ತತ್ವಗಳನ್ನು, ಕಡೆಗೆ ಗಾಂಧೀಜಿಯನ್ನೇ ಮರೆತಿರುವ ಕಾಂಗ್ರೆಸ್ಸು ಈ ವೇಶದ ಮಾತಾಡುವದು ಹಾಸ್ಯಕ್ಕೆಡೆಯಾದೀತು.

ಕಡೆಗೆ ಡಾಕ್ಟರ್ ರಾಜೇಂದ್ರ ಪ್ರಸಾದರೇ ಅಧ್ಯಕ್ಷರಾಗಬಹುದು.

ಬದಲಾವಣೆಜೀಕಂ.

ಭಾರತದ ಪ್ರೆಸಿಡೆಂಟರ ಆಯ್ಕೆಯಂದಿಗೇ ಮಂತ್ರಿಮಂಡಳದಲ್ಲಿ ಬದಲಾವಣೆ ಜೀಕಂ. ಕೇಂದ್ರದಲ್ಲಿ ಅಧಿಕಾರ ವಹಿಸಿರುವವರೆಲ್ಲರು ಈ ವರೆಗೆ ಮಾಡಿದ ಕೆಲಸ ಕಾರ್ಯಗಳು ದೇಶದ ದೃಷ್ಟಿಯಿಂದ ಸಂಶಯಾತೀತವಾದುದೆಂದು ಹೇಳಲಾಗುವದಿಲ್ಲ. ಆದ್ದರಿಂದ ಕೇಂದ್ರ ಮಂತ್ರಿಮಂಡಳದಲ್ಲಿ ಬದಲಾವಣೆ ಅತೀ ಅಗತ್ಯ. ಭಾರತವನ್ನು ರಿಪಬ್ಲಿಕೆಂದು ಸಾರಿದ ನಂತರ ಮಂತ್ರಿಮಂಡಳದ ಪ್ರಥಮ ಜ್ಞಾವಿಧಿ ನಡೆಯುವದು. ಆ ಕಾಲಕ್ಕೆ ಮೊದಲೆ ಹೊಸ ಮಂತ್ರಿಮಂಡಳದ ಹೆಸರು ಪ್ರಕಟವಾಗಿರುವದು. ಆಡಳಿತಾರ್ಢರಲ್ಲಿ ಒಂದೆರಡು ಮಾಲು ಹೊಸಬರಿರುತ್ತಿದ್ದೆ. ಸರ್ದಾರ್ ಪಟೇಲರು, ಗೃಹ, ಶ್ರೀ ಮುತ್ರಿ ಪ್ರಸ್ತಿ, ಆರ್ಥಿಕವಾಣಿಜ್ಯ ಪ್ರಚಾರಶಾಖೆಯ ಮಂತ್ರಿಗಳಿಗೂ ಹಾಗೆ. ಇದಲ್ಲದೆ ಸಂಸ್ಥಾನಗಳ ಶಾಖೆಯೂ ಇವರಿಗೆ ಸೇರಿದೆ. ಈ ರೀತಿ ಒಬ್ಬರಲ್ಲಿ ಅನೇಕ ಜವಾಬ್ದಾರಿಗಳನ್ನು ಹೇರುವದು ಅಯೋಗ್ಯ. ಸರ್ದಾರ್ ಪಟೇಲರಂಥವರು ಭಾರತಕ್ಕಾಗಿ ಇನ್ನೂ ಹಲವು ವರ್ಷ ಬಾಳಬೇಕು. ಆದ್ದರಿಂದ ಅವರಲ್ಲಿ ಸರ್ವಾಧಿಕಾರವಾಗಿರುವ ಈ ಇಲಾಖೆಗಳಿಗೆ ಪ್ರತ್ಯೇಕ ಮಂತ್ರಿಗಳು ಬೇಕು. ಇದೇ ಮಾತನ್ನು ಪಂಡಿತ ನೆಹರೂರವರಿಗೂ ಹೇಳಬೇಕು. ಪ್ರಧಾನ ಮಂತ್ರಿತ್ವದ ಜವಾಬ್ದಾರಿಯೇ ಒಬ್ಬನನ್ನು ಹಣ್ಣುಮಾಡಲು ಸಾಕು. ಹಾಗಿರುವಾಗ ವಿದೇಶ ಇಲಾಖೆಯೂ ಅವರ ತಲೆಯಲ್ಲಿದೆ. ಅದಕ್ಕೆ ಬೇರೊಬ್ಬರನ್ನು ಮಾಡುವದು ಸೂಕ್ತ. ಈಗಿನ ಮಂತ್ರಿಮಂಡಳದಲ್ಲಿಯ ದಕ್ಷರಲ್ಲದವರನ್ನು ಕೈಗೆ ಮಾಡಬೇಕು. ಪಾರ್ಟಿಪಕ್ಷದ ದೃಷ್ಟಿಯಿಂದ ಇದಕ್ಕೆ ಯೋಗ್ಯತೆ ಇರುವವರನ್ನು ಆಹ್ವಾನಿಸಿ ಜವಾಬ್ದಾರಿ ಕೊಡಬೇಕು. ನೂತನ ರಾಜ್ಯಘಟನೆಯು ರೂಪಕಲ್ಪನೆಯಿಂದ ಜಾರಿಗೆ ಬರುವಾಗ ಹೊಸದಾಗಿ ಮೂಡಿಬರುವ ಮಂತ್ರಿಮಂಡಲವೂ ಅಧಿಕಾರ ವಹಿಸಲಿ.

ಹೆಲ್ತ್ ಆಫೀಸರವರ ಆಫೀಸು
ಮಡಿಕೇರಿ ತಾ. 28—12—49.

ಮೋಟೀಸು.

ತಾ. 1-4-1950 ರಿಂದ 31-3-51 ನೆ ವರೆಗೆ ಮಡಿಕೇರಿಯಲ್ಲಿರುವ ವ್ಯಾಕ್ಸಿನ್ ಡಿಪೋಗೆ ಜಾನುವಾರುಗಳಿಗೆ ಟೀಕಾ ಮೂಲಕ ಬೇಕಾಗಿದೆ. ಟೆಂಡರುಗಳನ್ನು ತಾ 20-1-1950 ರ ಬೆಳಿಗ್ಗೆ 11 ಗಂಟೆ ವರೆಗೆ ಮಡಿಕೇರಿ ಹೆಲ್ತ್ ಆಫೀಸಿನಲ್ಲಿ ಸ್ವೀಕರಿಸಲಾಗುವದು. ಹೆಚ್ಚಿನ ವಿಷಯಗಳಿಗೆ ಮಡಿಕೇರಿಯಲ್ಲಿರುವ ಹೆಲ್ತ್ ಆಫೀಸರರಲ್ಲಾಗಲೀ ಅಥವಾ ಸ್ಯಾನಿಟರಿ ಇನ್ಸ್‌ಪೆಕ್ಟರವರಲ್ಲಾಗಲೀ ವಿಚಾರಿಸಬಹುದು.

ಸಿ. ಬಿ. ಕಾರ್ಯಪ್ಪ,
ಹೆಲ್ತ್ ಆಫೀಸರು, ಕೊಡಗು.

Health Officer's Office
Mercara, 28-12-1949.

NOTICE.

Sealed tenders for the hiring out of calves to the Vaccine Depot at Mercara, for one year commencing from 1-4-1950 to 31-3-1951 will be received at the Health Office Mercara upto 11 A M. on Friday the 20th January 1950.

For terms and other particulars, apply to the Health Officer Coorg, Mercara, or the Sanitary Inspector, at Mercara.

C. B. Kariappa,
Health Officer, Coorg.

ವಾರ್ತೆಗಳು.

ಶಾಂತಿ ಸಮ್ಮೇಳನದವರಿಗೆ ಗಾಂಧಿಜೀಯವರ ತಾಯಿತ

ಸೇವಾಗ್ರಾಮದಲ್ಲಿ ಸೇರಿದ ಶಾಂತಿ ಪರಿಷತ್ತಿನ ಪ್ರತಿನಿಧಿಗಳು ಪರಿಶತ್ತು ಮುಕ್ತಾಯಗೊಂಡ ಮೇಲೆ ತಮ್ಮ ಊರುಗಳಿಗೆ ಹೋಗುವಾಗ ಕೊಂಡುಹೋಗಲು ಹಲವು ಬೆಲೆಬಾಳುವ ವಸ್ತುಗಳನ್ನು ಸಂಗ್ರಹಿಸಿರುವರು. ಆ ವಸ್ತುಗಳಲ್ಲಿ ಗಾಂಧಿಜೀಯವರು ಬಂಗಾಳದ ಕಾರ್ಯಕರ್ತರಿಗೆ ಬರೆದ ಕಾಗದದ ಪ್ರತಿಯೂ ಒಂದಿರುವುದಾಗಿ ತಿಳಿದುಬರುತ್ತದೆ. ಆ ಪ್ರತಿಯನ್ನು ಗಾಂಧಿಜೀಯವರ ಸೌಕಾಲಿಯ ಕಾರ್ಯದರ್ಶಿಗಳಾಗಿದ್ದ ಪ್ರೊ. ನಿರ್ಮಲ ಕುಮಾರ ಬೋಸರು ಅಂದವಾಗಿ ಮುದ್ರಿಸಿ ಎಲ್ಲಾ ಪರಿಷತ್ ಸದಸ್ಯರಿಗೂ ಹಂಚಿರುತ್ತಾರೆ. 'ಇದನ್ನು ನಾವು ನಮ್ಮ ಊರುಗಳಿಗೆ ಕೊಂಡು ಹೋಗಿ ಜನರಿಗೆ ಹಂಚಲಿರುವೆವು ಎಂದು ಆ ಪರಿಷತ್ ಸದಸ್ಯರು ಉದ್ಗಾರ ತೆಗೆದಿರುವರು.' ಎಂದು ತಿಳಿದುಬರುತ್ತದೆ.

ಭಾರತ ಪ್ರಜಾಪ್ರಭುತ್ವದ ಉದ್ಘಾಟನೆ.

ಭಾರತ ಪಾರ್ಲಿಮೆಂಟಿನಲ್ಲಿ ಶ್ರೀ. ಎಚ್. ವಿ. ಕಾಮತರು ಕೇಳಿದ ಒಂದು ಪ್ರಶ್ನೆಗೆ ಉತ್ತರ ಕೊಡುತ್ತ ಪಂಡಿತ ನೆಹರುರವರು, ಭಾರತ ಪ್ರಜಾಪ್ರಭುತ್ವದ ಉದ್ಘಾಟನೆಗೆ ಸಂಬಂಧಪಟ್ಟ ಜನವರಿ ತಾ. ೨೬ ಮತ್ತು ೨೭ ರ ಕೆಲಸಕಾರ್ಯಕ್ರಮಗಳನ್ನು ತಿಳಿಸಿದ್ದಾರೆ.

ಜನವರಿ ತಾ. ೨೬ ರಂದು ಬೆಳಿಗ್ಗೆ ೯ ೩೦ ಇಲ್ಲವೆ ೧೦ ಗಂಟೆಗೆ ಸರಕಾರದ ದರ್ಬಾರ್ ಹಾಲಿನಲ್ಲಿ ಅಧ್ಯಕ್ಷರಾಗಿ ಆರಿಸಲ್ಪಟ್ಟವರು ಪ್ರತಿಜ್ಞಾವಿಧಿ ಕೈಕೊಳ್ಳುವರು. ಆಗ ೩೧ ತೋಪುಗಳನ್ನು ಹಾರಿಸಿ, ಅಧ್ಯಕ್ಷ ಧ್ವಜವನ್ನು ಸರಕಾರಿ ಭವನದ ಮೇಲೆ ಏರಿಸಲಾಗುವುದು. ಆ ನಂತರ ಅಧ್ಯಕ್ಷರು ಮಂತ್ರಿ ಮಂಡಲದ ಕಡೆಯವರಿಂದ ಪ್ರತಿಜ್ಞಾವಿಧಿಗಳನ್ನು ಪ್ರಾಪ್ತಿಸುವರು. ದಿಲ್ಲಿಯಲ್ಲಿರುವ ವಿದೇಶಿ ರಾಯಭಾರಿಗಳನ್ನು ಫುಟ್ಸಾ ಪರಿಷತ್ ಸದಸ್ಯರನ್ನು ಮತ್ತು ಸಾರ್ವಜನಿಕರ ಕಡೆಯಿಂದ ಪ್ರಮುಖರಾಜಪರನ್ನು ಈ ಸಮಾರಂಭಕ್ಕೆ ಆಮಂತ್ರಿಸಲಾಗುವುದು.

ಅಪರಾಹ್ನ ಅಧ್ಯಕ್ಷರು ತಮ್ಮ ಅಂಗರಕ್ಷಕರೆತಡಗೂಡಿ ಸರಕಾರಿ ಭವನದಿಂದ ಇರ್ವಿನ್ ಸ್ಟೇಡಿಯಮ್‌ವಿನೆ ಮೆರವಣಿಗೆ ಹೋಗಿ ಅಲ್ಲಿ ರಾಷ್ಟ್ರಧ್ವಜವನ್ನೇರಿಸುವರು. ಭಾರತ ಸೈನ್ಯದ ಯೋಧರಿಂದ 'ಗೂರ್ಖಾನೃತ್ಯ' ನಡೆಯುವುದು. ಕೆಬಿನೆಟ್ ಮಂತ್ರಿಗಳು, ರಾಜಕಾರಣಿ ದಳದ ಸದಸ್ಯರು, ಮಜಹಾಗ. ದೈತ್ಯ, ಹರಿಜನ ಮತ್ತು ಇತರ ಸಂಸ್ಥೆಗಳ ಪ್ರತಿನಿಧಿಗಳು ಈ ಸಮಾರಂಭಕ್ಕೆ ಆಹ್ವಾನಿಸಲ್ಪಡುವರು. ರಾತ್ರಿ ಅಧ್ಯಕ್ಷರು ಸರಕಾರಿ ಭವನದಲ್ಲಿ ಒಂದು ಔತಣ ಕೂಟವನ್ನು ಕೊಡುವರು.

ಜನವರಿ ತಾ. ೨೭ ರಂದು ಜನ್ಪಥ್‌ನ ಕಡೆಯಿಂದ ಸತ್ಕಾರ ಕೂಟ ನಡೆಯುವುದು. ಇತಕ್ಕೆ ಸಾಧ್ಯವಾದಷ್ಟು ಹೆಚ್ಚಿಗೆ ಮಂದಿಯನ್ನು ಸಾರ್ವಜನಿಕರ ಕಡೆಯಿಂದ ಆಮಂತ್ರಿಸಲಾಗುವುದು.

ಜನವರಿ ತಾ. ೨೬ ಮತ್ತು ೨೭ ಸಾರ್ವಜನಿಕ ರಜಾ ದಿನಗಳಾಗಿ ಸಾರಲ್ಪಡುವವು.

ಗೃಹ, ರಕ್ಷಣೆ, ವಿದೇಶಾಂಗ ಚಟುವಟಿಕೆಗಳ ಕಡೆಯ ಪ್ರತಿನಿಧಿಗಳಿಂದ ಮತ್ತು ಸರಕಾರಿ ಭವನದ ಕೆಲ ಮಂದಿ ಸದಸ್ಯರಿಂದ ಕೊಡಗೂಡಿದ ಒಂದು ಸಮಿತಿಯು ಆಯಪಲ್ಲಟ್ಟು, ಬೇರೆ ಬೇರೆ ವಿಧಗಳ ವಿವರಗಳನ್ನು ನಿರ್ಣಯಿಸುವರೆ ಅವರಿಗೆ ಬಿಟ್ಟುಕೊಡಲಾಗಿದೆ.

ಪ್ರಾಂತೀಯ ಮತ್ತು ಸಂಸ್ಥಾನೀಯ ಯೂನಿಯನ್‌ಗಳ ಸರಕಾರಗಳೂ ಇಂತಹದೇ ವ್ಯವಸ್ಥೆ ನಡೆಸುವಂತೆ ಹಾರೈಸಲಾಗಿದೆ.

'ಈ ಸಮಾರಂಭವು ಗೌರವ ಪೂರ್ಣವಾಗಿ ಮತ್ತು ಶಿಸ್ತಿನಿಂದ ಆಚರಿಸಲ್ಪಡಬೇಕು; ಏಕಕೂಟದಲ್ಲಿ ನಮ್ಮ ಪರಿಮಿತವಾದ ಆರ್ಥಿಕಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಆಡಂಬರವಿಲ್ಲದೆ ಸರಳವಾಗಿ ಆಚರಿಸುವಂತೆ ತೆ ನಾವು ಪ್ರಯತ್ನಿಸಬೇಕು' ಎಂಬುದಾಗಿ ಪಂಡಿತ ನೆಹರುರವರು ಸೂಚಿಸಿದ್ದಾರೆ.

ಭಾರತ ಪ್ರಜಾಪ್ರಭುತ್ವದ ಉದ್ಘಾಟನೆಗೆ ನಿರ್ಣಯಿಸಲ್ಪಟ್ಟ ದಿನವು ಜ್ಯೋತಿಷ್ಯದೃಷ್ಟಿಯಲ್ಲಿ ಅತಿ ಭವಿನವೆಂದು ದಕ್ಷಿಣ ಹಿಂದೂಸ್ಥಾನದಿಂದ ತಿಳಿದು ಮಂಡಲ ಬಂಧುದಿದಿಯೆಂ ಎಂಬುದಾಗಿ ಶ್ರೀ. ನಾಗಪ್ಪ ನವರು ಕೇಳಿದ ಪ್ರಶ್ನೆಗೆ ಉತ್ತರ ಕೊಡುತ್ತ ಪಂಡಿತ ನೆಹರುರವರು, 'ಸರಕಾರವು ತನ್ನ ಕಾರ್ಯಕ್ರಮವನ್ನು ನಿಶ್ಚೈಸುವಾಗ ನಕ್ಷತ್ರಗಳೊಡನೆ ಮಂತ್ರಾಲೋಚನೆ ಕೇಳುವುದೆಂದಿಲ್ಲ' ಎಂದಿರುವರು.

ವಾರ್ತೆ.

ಕೊಲಂಬೊದಲ್ಲಿ ಕೂಡಲಿರುವ ಕಾಮನ್‌ವೆಲ್ತ್ ಸಮ್ಮೇಳನವು ನುಗಿಕಾಯುವಾಗ ನಂತರದಲ್ಲಿ ಭಾರತ ಪಾಕಿಸ್ಥಾನಗಳಿಗೆ ಜೆವಿನರು ಭೇಟಿಕೊಡಬೇಕೆಂದು ಆ ಮಂತ್ರಿಸಲಾಗಿದ್ದು ಅವರು ಈ ಆಮಂತ್ರಣ ದನ್ವಯ ಭಾರತ ಪಾಕಿಸ್ಥಾನಗಳಿಗೆ ಭೇಟಿ ಈಯುವುದು ಸಾಧ್ಯವಿಲ್ಲವೆಂದು ಬ್ರಿಟಿಷ್ ಸರಕಾರದ ಪರರಾಷ್ಟ್ರ ಖಾತೆಯ ಓರ್ವ ವಕ್ತಾರನು ಹೇಳಿದನು.

ಚೀನದ ಕಮ್ಯೂನಿಸ್ಟ್ ಸರಕಾರಕ್ಕೆ ಭಾರತ ಸರಕಾರವು ಮನ್ನಣೆ ಕೊಡುವ ನಿರ್ಣಯ ಮಾಡಿದೆಯೆಂದು ಭಾರತ ಸರಕಾರವು ನಿರ್ಧಾರವನ್ನು ಬ್ರಿಟಿಷ್ ಸರಕಾರಕ್ಕೆ ತಿಳಿಸಿದೆಯೆಂದು ಹೇಳಲಾಗಿದೆ.

ಈ ತನಕ ಹೈದರಾಬಾದ್ ಸಂಸ್ಥಾನದೊಳಗೆ ಪ್ರತ್ಯೇಕ ನಾಣ್ಯ ಚಲಾವಣೆಯಿದೆಯಲ್ಲದೆ ಸುಂಕದ ವಿಚಾರಾಡೂ ಇದೆ. ಹೈದರಾಬಾದು ಭಾರತದಲ್ಲಿ ಸೇರ್ಪಡೆಯಾಗುವ ನಿರ್ಣಯವಾದ ದಿಂದ ಅಲ್ಲಿನ ನಾಣ್ಯ ಚಲಾವಣೆಯೂ ಸಮಗ್ರ ಭಾರತದ ನಾಣ್ಯ ಚಲಾವಣೆಗೆ ಒಳಪಡಬೇಕಾಗಿದ್ದು ಈ ಬಗ್ಗೆ ಕೃಷ್ಣಸೂಚಾರಿ ಸಮಿತಿಯು ಮಾಡಿದ ಸಲಹೆಗಳನ್ನು ಉಭಯ ಸರಕಾರಗಳ ಕೆಲವೊಂದು ತಿದ್ದುಪಡಿಗಳೊಡನೆ ಸ್ವೀಕರಿಸಲು ಒಪ್ಪಿನೆಯೆಂದು ತಿಳಿದಿದೆ.

ಎಳೆರೆಗೆ ಅತ್ಯಂತ ಹೆಚ್ಚು ಬೆಳೆ ಬೆಳೆಯುವ ರೈತರಿಗೆ ಬಹುಮಾನ ಕೊಡುವ ಉದ್ದೇಶದಿಂದ ಪೂರ್ವಪಂಜಾಬ್ ಸರ್ಕಾರ ಈ ಸಾಲಿಗೆ ೪ ಲಕ್ಷ ರೂ. ಮಂಜೂರು ಮಾಡಿದೆ.

ರೈಲ್ವೆ ಮೂಲಕ ಕಳುಹಿಸುವ ಪೋಸ್ಟಲ್ ಕವರುಗಳ ಬೆಲೆಯನ್ನು ತಲಾ ಒಂದೂವರೆಣೆ ಮಾಡಲು ನಿರ್ಧರಿಸಲಾಗಿದೆ. ಇದಕ್ಕಾಗಿಯೇ ವಿಶೇಷ ಕವರ್‌ಗಳನ್ನು ತಯಾರು ಮಾಡಲಾಗುವುದು.

ಇಂಡಿಯಾ ಸರ್ಕಾರದ ಕೆಲವು ಕಚೇರಿಗಳನ್ನು ದೆಹಲಿಯಿಂದ ಬೇರೆ ಕೇಂದ್ರಗಳಿಗೆ ವರ್ಗಾಯಿಸುವುದು. ಈ ಬದಲಾವಣೆ ಮುಂದಿನ ಮಾರ್ಚಿ ೩೦ ರೊಳಗೆ ಆಗುವ ನಿರೀಕ್ಷೆ ಇದೆ.

ರಷ್ಯಾ, ಬ್ರಿಟನ್ ಮತ್ತು ಅಮೇರಿಕಾದ, ಸಂಯುಕ್ತ ಸಂಸ್ಥಾನಗಳ ಮೇಲೆ 'ಕ್ರಿವಿ ಬಾಂಬು'ಗಳನ್ನು ಹಾಕಲು ಯೋಚಿಸಿದ್ದರೆಂಬ ಅಪವಾದನೆಯ ಮೇಲೆ ನಾಲ್ಕು ಮಂದಿ ಜಪಾನಿ ಪ್ರವೀಣರಿಗೆ ರಷ್ಯನ್ ಮಿಲಿಟರಿ ಟ್ರಿಬ್ಯೂನಲ್ ತಲಾ ೨೫ ವರ್ಷಗಳ ಕಾರಾಗೃಹ ವಾಸವನ್ನು ವಿಧಿಸಿದೆಯೆಂದು ಮಾಸ್ಕೋದ ಪ್ರಕಟಣೆ.

ವಾರದಲ್ಲಿ ಒಂದಾವರ್ತಿ ಊಟ ಬಿಡುವ ಚಳವಳಿಕ್ಕೆ ಪ್ರಾಂತೀಯ ಹಾಗು ಸಂಸ್ಥಾನೀಯ ಸರಕಾರಗಳು ಪೂರ್ಣ ಬೆಂಬಲನೀಡತಕ್ಕದ್ದೆಂದು ಕೇಂದ್ರ ಆಹಾರ ಮಂತ್ರಿ ಮಂಡಲವು ಕೇಳಿಕೊಂಡಿರುವುದು.

'ನೆಹರುಗಳವರ ಭೇಟಿಯಿಂದ ನನಗೆ ಅತ್ಯಾನಂದವಾಯಿತು. ಭಾರತಕ್ಕೆ ಅವರು ಒಂದು ಅಮೂಲ್ಯ ವರ' ಎಂಬುದಾಗಿ ಜಗತ್ಪ್ರಸಿದ್ಧ ವಿಜ್ಞಾನಿ ಪ್ರೊ. ಆಲ್ಬರ್ಟ್ ಐನ್‌ಸ್ಟೀನರು ಸಂಯುಕ್ತ ಅಮೇರಿಕದ ಹೊವಾರ್ಡ್ ವಿಶ್ವವಿದ್ಯಾನಿಲಯದ ಇಂಗ್ಲಿಷ್ ಪ್ರೊಫೆಸರ್ ಡಾ. ಅಮಿಯ ಚಕ್ರವರ್ತಿಯವರಿಗೆ ಬರೆದ ಒಂದು ಪತ್ರದಲ್ಲಿ ಹೇಳಿದ್ದಾರೆ.

ವಿಭಜನಾಸಮಿತಿಯು ಕಾರ್ಯರ್ಕಲಾಪಗಳು ಈಗಿನ ಗತಿಯಲ್ಲೆ ಮುಂದೆ ಸಾಗಿದರೆ ಜನವರಿ ತಾ. ೩೧ ರೊಳಗೆ ಅಂಧ್ರಾ ಪ್ರಾಂತ್ಯ ನಿರ್ಮಾಣ ಸಾಧ್ಯವಾಗಬಹುದೆಂದು ವಿಭಜನಾಸಮಿತಿಯು ಪ್ರಕಟಿಸಿದೆ.

ಪ್ರಾಂತ್ಯಗಳಿಗೆ ಮತ್ತು ಸಂಸ್ಥಾನಗಳಿಗೆ ಪೆಟ್ರೋಲ್ ಕೋಟಾವನ್ನು ೧೯೪೭ನೇ ಜನವರಿ ಮಾರ್ಚ್ ತ್ರೈಮಾಸಿಕ ಅವಧಿಗೆ ಶೇಕಡಾ ೩ ರಷ್ಟು ಇಳಿಸಲು ಭಾರತ ಸರಕಾರ ನಿರ್ಧರಿಸಿದೆ.

ಈಶಾನ್ಯ ರಾಗಸ್ಟ್ ತಿಂಗಳ ಮೊದಲ್ಗೊಂಡು ೧೧,೦೦೦ ಹಿಂದೂಗಳು ಸಿಂಧ್ ಪ್ರಾಂತ್ಯ ತೊರೆದಿರುವರೆಂದು ತಿಳಿಯಲಾಗಿದೆ.

ಭಾರತದ ಸ್ವಾತಂತ್ರ್ಯ ಚಳವಳಿದ ಕುರಿತಾದ ಒಂದು ಇತಿಹಾಸ ಪ್ರಯೋಜನೆಗೆ ಬೇಕಾಗಿ ಭಾರತ ಸರಕಾರವು ಪ್ರಸಿದ್ಧ ಇತಿಹಾಸಕ್ಕಾರರ ಒಂದು ಸಮಿತಿ ನೇಮಿಸಿರುವುದು.

ಅಂಧ್ರ ಪ್ರಾಂತ್ಯದ ಗಡಿಗಳನ್ನು ನಿರ್ಣಯಿಸುವ ಬಗ್ಗೆ ಭಾರತ ಸರಕಾರವು ಪಟ್ಟಾ ಜೈಕೋರ್ಟಿನ ಮುಖ್ಯ ನ್ಯಾಯಾಧೀಶ ಶ್ರೀ. ಸಿ. ಎಂ. ಅಗರ್‌ವಾಲಾ ಅವರ ಹೆಸರು ಸೂಚಿಸಿರುವುದು.

ಭಾರತ ಪಾಕಿಸ್ಥಾನ ಗಡಿಯಲ್ಲಿ ಮೇಲಿಂದ ಮೇಲೆ ಗಲಭೆಗಳು ನಡೆಯುತ್ತಲೇ ಇವೆ. ಇತ್ತೀಚೆಗೆ ಪಾಕಿಸ್ಥಾನಿ ಯೋಧರು ಬೋರ್ ಎಂಬಲ್ಲಿ, ಸುಮಾರು ೬ ಮೈಲುಗಳಷ್ಟು ಭಾರತ ಸ್ವದೇಶದೊಳಗೆ ಪಾಕಿ ನಡೆಸಿದ ಸುದ್ದಿಯಿದೆ. ಅಲ್ಲಿಯ ಪೋಲಿಸ್ ಠಾಣೆಯ ಮೇಲೆ ಹಲ್ಲೆಮಾಡಿ ಆದನ್ನು ಸುಟ್ಟುಹಾಕಿರುವರೆಂದೂ ತಿಳಿದುಬರುತ್ತದೆ.

ಡಾ. ಪಿ. ಸುಬ್ಬರಾಯುಡುರು ಭೂಷಣವಾಗಿ ರಚನೆಯಾದ ಇಂಡೋನೇಶ್ಯ ಯುಕ್ತ ಸಂಸ್ಥಾನಕ್ಕೆ ಭಾರತದ ಕಡೆ ರಾಯಭಾರಿಯಾಗಿ ನೇಮಕಹೊಂದಿರುವರು.

ಭಾರತದ ಪಾರ್ಲಿಮೆಂಟಿನಲ್ಲಿ ಆತ್ಮಶ್ರೀ ಹಳೆಯ ಸದಸ್ಯರಾದ ಶ್ರೀ. ಬಿ ದಾಸ್ ರವರು ಆರ್ಥಿಕ ಸಮಿತಿಯ ವರದಿಯನ್ನು ಪರಿಶೀಲಿಸುತ್ತ ಸರಕಾರದ ಬಗ್ಗೆ ತಗಲುವ ವಿವರೀತ ಖರ್ಚನ್ನು ತೀವ್ರ ಖಂಡಿಸಿರುವರು. ಕೇಂದ್ರದಲ್ಲಿ ಕೇವಲ ೯ ಮಂತ್ರಿಗಳಿದ್ದರೆ ಸಾಕಾಗುವುದೆಂದು ಅವರ ಅಭಿಪ್ರಾಯ.

ಮುಂದಿನ ಮೇ ತಿಂಗಳಲ್ಲಿ ಐಕ್ಯ ಸಂಯುಕ್ತ ಅಮೇರಿಕ ಸಂದರ್ಶನಕ್ಕಾಗಿ ಪಾಕಿಸ್ಥಾನದ ಪ್ರಧಾನ ಸಚಿವ ಲಿಯಾಖತ್ ಅಲಿಖಾನರು ಕರಾಚಿ ಪತ್ರಿಕಾ ಪ್ರತಿನಿಧಿಗಳೊಡನೆ ತಿಳಿಸಿರುವರು.

ಈ ವರ್ಷದ ಮೊದಲ ಹತ್ತು ತಿಂಗಳಲ್ಲಿ ೭,೬೦೦,೦೦೦ ಡಾಲರ್ ಬೆಲೆ ಬಾಳುವ ಕೋವಿಗಳು, ರೈಫಲುಗಳು ಮತ್ತು ಕೋವಿಗೆ ಉಪಯೋಗಿಸುವ ತೋಟಿಗಳು ಪಾಕಿಸ್ಥಾನಕ್ಕೆ ರವಾನೆಯಾಗಿದೆಯೂಗಿ ತಿಳಿಬರುತ್ತದೆ. ಅಕ್ಟೋಬರ್ ಒಂದೇ ತಿಂಗಳಲ್ಲಿ ೬೦೦,೦೦೦ ಡಾಲರ್ ಪೌಲ್ಯದ ಕೋವಿಗಳು ಮತ್ತು ಸಿಡಿಮದ್ದು ಸಂಚಾರಂಜಾಗಿದೆ. ಇಂತಹ ಯಾವುದೇ ರೀತಿಯ ಸಾಗಾಟ ಭಾರತಕ್ಕೆ ಈ ವರ್ಷ ಆದುದಿಲ್ಲ.

ಹೊಸ ಘಟನೆಗಳ್ಳಯ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಮತ್ತು ಸಂಸ್ಥಾನಗಳಲ್ಲಿ ಮತದಾರ ಪಟ್ಟಿ ತಯಾರಿಸುವ ಬಗ್ಗೆ ತಗಲುವ ಒಟ್ಟು ಖರ್ಚನ್ನು ಅರ್ಧವಷ್ಟು ಕೇಂದ್ರವು ಪಾವತಿಸುವುದು.

ಒಂದು ವರ್ಷದೊಳಗೆ ಸಂಪೂರ್ಣ ಶಾಂತಿ ಎಂಬ ಚಳವಳಿಯನ್ನು ಬರ್ಮಾದ ಪ್ರಧಾನ ಸಚಿವ ಥಾಕಿನ್ ನೂರವರು ಈ ತ್ರೀಜೆಗೆ ಉದ್ಘಾಟಿಸಿರುವರು.

ಸಿಂಧದಲ್ಲಿ ಉಳಿದಿರುವ ಹಿಂದೂಗಳನ್ನು ಮೇಲಿಂದ ಮೇಲೆ ಪೀಡನೆ ಕೊಟ್ಟು ಹೊರತಳ್ಳುವ ಹೊಸ ಯತ್ನವೊಂದು ಪಾಕಿಸ್ಥಾನ ಸರಕಾರದ ಕಡೆಯಿಂದ ನಡೆಯುತ್ತಿದೆ ಎಂಬುದು ಭಾರತ ಸರಕಾರದ ಅವಗಾಹನೆಗೆ ಬಂದಿರುತ್ತದೆ. ಈ ಕುರಿತು ಭಾರತ ಸರಕಾರವು ಪಾಕಿಸ್ಥಾನ ಸರಕಾರಕ್ಕೆ ನಿಷೇಧ ಸೂಚನೆಯನ್ನು ಇತ್ತೀಚೆಗೆ ಕಳಿಸಿರುವುದು. ಸಿಂಧದ ಹೈದರಾಬಾದಿನಿಂದ ನಿರಾಶ್ರಿತರನ್ನು ಮಧ್ಯರಾತ್ರಿ ಹೊತ್ತಿನಲ್ಲಿ ಎಬ್ಬಿಸಿ ಮನೆಯಿಂದ ಹೊರಗೆ ಹಾಕಿದ ಕಳವು ಪ್ರಕರಣಗಳನ್ನೂ ನಿಷೇಧ ಸೂಚನೆಯಲ್ಲಿ ಪ್ರಸ್ತಾಪಿಸಲಾಗಿದೆ.

ವಿಡಂಬನ

ಸೌಂದರ್ಯ ಮತ್ತು ಕುರೂಪತೆ.

ಲೇ:–ಶ್ರೀ ಬಿ. ಡಿ. ಗಣಪತಿ.

'ಹೊಳೆಯುವದೆಲ್ಲವೂ ಚಿನ್ನವಲ್ಲ' ಎಂಬ ನಾಣ್ನುಡಿ ಪತ್ಯವಿರಬಹುದು. ಆದರೆ ಹೊಳೆಯುವ ಆಶೆ ಎಲ್ಲರಲ್ಲಿಯೂ ಇದೆ ಎಂದು ಸನ್ನ ಸಿದ್ಧಾಂತ ಈ ದೃಷ್ಟಿಯಿಂದಲೇ ನಾನಾ ಸೌಂದರ್ಯ ಪ್ರಜ್ಞೋದಕ ವಸ್ತುಗಳ ಆವಿಷ್ಕಾರನಾಗಿದೆ. ನಾನಾ ರೀತಿಗಳ ಉಡುಪು, ನಾನಾ ರೀತಿಯ ಬಣ್ಣಗಳ ಉಪಯೋಗವಾಗುತ್ತಿದೆ. ಮುಖಕ್ಕೆ ಮುಖಪುಡಿ ಹಾಕಿ ಬೆಳ್ಳಗೆ ಮಾಡಿದ್ದು ಯಾವ ರೀತಿ ಕ್ಷಣಿಕವೋ ಆವೇ ರೀತಿ ಶರೀರದ ಬಾಹ್ಯ ಸೌಂದರ್ಯವೂ ಕೂಡ! ಇದು ಸ್ಥಿರವಲ್ಲ ಬೆಳಗಿನ ಮಂಜಿಗೆ ವಿರಾಜಗೊಂಡು ಸಾಯಂಕಾಲದ ಸಮಯಕ್ಕೆ ಮುದುಡಿಕೊಳ್ಳುವ ಹೂವಿನಂತೆ ಯೌವನ ಕಾಲದಲ್ಲಿ ಬೆಳಗಿ ಕೆಲ ವರ್ಷಗಳಲ್ಲಿ ಸೌಂದರ್ಯವು ಮಾಯವಾಗುವದು. ಯೌವನದಲ್ಲಿ ಜೊತೆಯೊಗಿ ನಲಿದು ಬೆಳಗುವ ಸೌಂದರ್ಯವು ವೃದ್ಧಾಪ್ಯದಲ್ಲಿ ಲೋಪಿತವಾಗುತ್ತದೆ. ಎಷ್ಟೇ ಪ್ರಯತ್ನಪಟ್ಟರೂ ಹಿಂದೆ ನಿಂಚಿನಿನುಗುತ್ತಿದ ಕಣ್ಣು ಕಾಂತಿಹೀನವಾಗುತ್ತದೆ. ಕೂಪಲು ಬೆಳ್ಳಗಾಗಿ ಉದುರುತ್ತದೆ. ಮುಖವು ಸುಕ್ಕುಗಟ್ಟುತ್ತದೆ. ಅವಯವಗಳು ಶಿಥಿಲವಾಗುತ್ತವೆ ಆದರೆ ಕುರೂಪತನ ಹಾಗಲ್ಲ. ಇದು ಜೀವನದ ಪ್ರಾರಂಭದಿಂದ ಅಂತ್ಯದವರೆಗೂ ಜೊತೆ ಬಿಡದು. ಆದಕ್ಕಲ್ಲಿ ನೋವಿಲ್ಲ, ಆಡಂಬವಿಲ್ಲ. ಸುಖದುಃಖಗಳಿಗೆಡಲ್ಲೂ ನಿಷ್ಕಮದೃಷ್ಟಿಯಿಂದಿರುವದು.

ಸೌಂದರ್ಯವು ಜೀವನ ಸಂಗ್ರಾಮಕ್ಕೆ ಹೋಗಲಸಮ್ಮಲ್ಲ! ಸ್ವಲ್ಪ ಪರಿಶ್ರಮ ಪಟ್ಟು ತಿಲಾಂಜಲಿ ಸೌಂದರ್ಯ ಅಳಿಯುತ್ತದೆ. ಬಿಸಿಲಿನಲ್ಲಿ ಬಾಡಿ ಕಾಂತಿ ವಿಹೀನವಾಗುತ್ತದೆ. ಋತುವಿನ ಬದಲಾವಣೆಯಿಂದಿಗೆ ಕಷ್ಟಕ್ಕೊಳಗಾಗುತ್ತದೆ. ಜೀವನ ಸಂಗ್ರಾಮದ ಕಷ್ಟಗಳು ಅದರ ಮೇಲೆ ತಮ್ಮ ಅಚ್ಚಳಿಯದ ಮುದ್ರೆಯೊತ್ತಿ ವಿರಾಜಿಸಿಕೊಳ್ಳುತ್ತವೆ ಕೆಲಸ, ಹೋರಾಟದ ರಂಗಕ್ಕಿಳಿದರೆ ಸೌಂದರ್ಯ ಉಡುಗಿ ಮರೆಯಾಗುವದು. ಅಡಿಗೆಯ ಮನೆಗೆ ಇಣುಕಿದರೆ ಅದರ ಅವನತಿ ಪ್ರಾರಂಭವಾಗುತ್ತದೆ. ಪಾತ್ರೆಗಳನ್ನು ಪೊಟ್ಟಣದೆ ಕೈಯು ಅಂದಹಾಳಾಗುತ್ತದೆ. ಸೌಂದರ್ಯವತಿ ಚಿತ್ರಾಂಗಿನಿಯಾದ ಕೋಮಲತೆಯ ಪ್ರತಿರೂಪವಾಗಿ ಸೌಂದರ್ಯವು ಅಶಾಶ್ವತವೆನಿಸುತ್ತದೆ!

ಒಂದು ಕಾಲದಲ್ಲಿ ಒಬ್ಬ ಅರಸನಿದ್ದನಂತೆ. ಅವನಿಗೆ ಮೂರು ಸುಂದರ ಹಾಗೂ ಕೋಮಲ ಬೆಡಗಿನ ಪುತ್ರಿಯರಿದ್ದರಂತೆ. ಒಂದು ರಾತ್ರಿ ಒಬ್ಬಾಕೆಯು ಚಂದ್ರನ ತೀವ್ರ ಬೆಳಕಿನಲ್ಲಿ ತಿರುಗಾಡಲು ಹೊರಟಾಗ ಅವನ ಬೆಳಕಿನಿಂದಲೇ ಬೆಂದು ತನ್ನ ಸೌಂದರ್ಯವನ್ನು ಕಳಕೊಂಡ ವೃತ್ತಾಂತವನ್ನು ಕೇಳಿರ್ವರು ನೆರೆಯ ಮನೆಯ ಕಟ್ಟಿಯ ಶಬ್ದದಿಂದ ಬೆಚ್ಚಿದಂತೆ! ಇನ್ನೊಬ್ಬಳು ಒಂದು ಗುಲಾಬಿಹೂವು ಕಾಲಿಗೆ ಬಿದ್ದ ಕಾರಣ ಗಾಯಗೊಂಡಳಂತೆ!

ಈ ಕಥೆಯಲ್ಲಿ ಉತ್ಪ್ರೇಕ್ಷೆ ಇರಬಹುದು. ಆದರೆ ಸೌಂದರ್ಯದ ಕಥೆಯೀಗೆ. ಯಾವ ಕಷ್ಟವನ್ನೂ ಅದು ಸಹಿಸಲಾರದು. ತಾನು ಬಯಸಿದ ವಸ್ತುವೇ ಪ್ರಯೋಜನವಾಗಿರುವ ಸೌಂದರ್ಯವು ಇತರರಿಗೆ ಹಿತವನ್ನು ಮಾಡೀತು? ಆದರೆ ಕುರೂಪತನವು ಪ್ರತಿಯೊಂದಕ್ಕೂ ಎದಿಕೊಡಬಲ್ಲುದು. ಯಾವ ಪರಿಸ್ಥಿತಿಯಲ್ಲೂ ಅದು ಧೃತಿಗೆಡದು. - ಗರೀಬನಾಗಿ ಮೈಗೆ ಬಟ್ಟೆ ಹಾಕಲು ಗತಿ ಇಲ್ಲದ ನಗ್ನನಾದವನಿಂದ ಯಾರು ಏನನ್ನು ಕದಿಯಲು ಸಾಧ್ಯ?

ಸೌಂದರ್ಯವನ್ನು ಉಳಿಸಿಕೊಳ್ಳಲು ನಮಗೆ ಸೇವಕರು ಬೇಕು. ಆದರೆ ಕುರೂಪಿತನವು ತನ್ನ ಕಾಲಿನ ಮೇಲೆ ನಿಲ್ಲಲಾಪುದು. ಆತ್ಮವಿಶ್ವಾಸ, ಆತ್ಮನಿರ್ಭರತೆ ಕುರೂಪತನದ ಜೀವಮಂತ್ರಗಳು.

ಸೌಂದರ್ಯದಲ್ಲೂ ವಿಶಿಷ್ಟತವಿದೆ. ಬಾಹ್ಯ ಶಾರೀರಿಕ ಸೌಂದರ್ಯದೊಂದಿಗೆ ಅಂತರಿಕವಾದ ಪವಿತ್ರ ಆತ್ಮಸೌಂದರ್ಯವು ಸೇರಿದರೆ ಚಿನ್ನಕ್ಕೆ ಸುಗಂಧ ದೊರೆತಂತೆ! ಆದರೆ ಹೆಚ್ಚಾಗಿ ಸೌಂದರ್ಯವು ಮುತ್ತುಗದ ಹೂವಿನಂತೆ! ನೋಡಲು ರಮಣೀಯ. ವಿವಿಧ ರಂಗುಗಳು. ಆದರೆ ಸುವಾಸನೆಯು ಸುಳಿವಿಲ್ಲ! ಸೌಂದರ್ಯದ ಜೀವಿ ಅಭಿಮಾನ ಮಾತ್ರವಿದೆ. ಆನುಸಂಧಾನವಿಲ್ಲ. ಆದರೆ ಕುರೂಪತನವು ಪ್ರತಿ ಹೆಜ್ಜೆಯಲ್ಲೂ 'ನಾನೆಷ್ಟರವನು' ಎಂಬುದನ್ನು ಆಲೋಚಿಸಿ ವರ್ತಿಸುತ್ತದೆ. ಈ ಪುಣ್ಯಭಾವನೆಯಿಂದಾಗಿ ಅದರ ತಲೆ ತಿರುಗುವಂತಿಲ್ಲ. ಈ ಆತ್ಮಸಂಧಾನದ ಕಾರಣ ಕುರೂಪಿಯು ಆತ್ಮವು ಪವಿತ್ರವಾಗಿರುವದು ಸಾಧ್ಯವಾಗುತ್ತದೆ. ಎಲ್ಲಿ ಹೊರಗೆ ಕಣ್ಣು ಚುಚ್ಚುವ ಸೌಂದರ್ಯವಿರುವುದೊ ಒಳಗೆ ಕಣ್ಣು ಕಾಣದ ಅಂಧಕಾರವೂ ಇರಬಹುದು. ಆದರೆ ಕುರೂಪತನವಲ್ಲಿ ಹಾಗಲ್ಲ. ಹೊರಚಿವರಣ ಕಣ್ಣಿಗೆ ಹಿಡಿಸದು. ಆದರೆ ಒಳಗೆ ಅಮೂಲ್ಯ ರತ್ನವಿರಬಹುದು. ಎಲ್ಲಕ್ಕೂ ಬೆಲೆಯು ರತ್ನಗಳು ಭೂಗರ್ಭದೊಳಗಿವೆಯೇ ವಿನಹ ಹೊರಗಿಲ್ಲ ತಾನೆ?

ಭಾರತೀಯ ಸಂಸ್ಕೃತಿಯು ಬಾಹ್ಯ ಆಡಂಬರಕ್ಕೆ ಎಂದೂ ಪೂಜೆ ಸಲ್ಲಿಸದು. ನಮ್ಮ ಚರಿತ್ರೆಯ ಪುಟಗಳನ್ನು ನೋಡಿದರೆ ಮಹಾಮಹಾವ್ಯಕ್ತಿಗಳೆಲ್ಲರೂ ಕುರೂಪಿಗಳೆ! ಜಗತ್ತಿಗೇ ಅಗ್ರಗಣ್ಯನಾದ ನಾರದನು ಕುರೂಪಿ. ಭಾರತ ಇತಿಹಾಸದ ಸ್ವರ್ಣಯುಗದ ಪ್ರತಿಶೋಕಚಕ್ರವರ್ತಿ ಕುರೂಪಿ. ರಣಜಿತ್ ಸಿಂಹನು ಕುರೂಪಿ. ಭಾರತದ ಮೂಕ್ಕಿಕ ಮಣಿಯೆನಿಸಿದ ಮಹಾತ್ಮಾ ಗಾಂಧಿಯನ್ನೇ ತೆಗೆದುಕೊಳ್ಳಿರಿ. ಜಗದ್ವಿಖ್ಯಾತ ಸೋಕ್ರೆಟಿಸ್ ಕುರೂಪಿ ಇಂಥಾ ನೂರಾರು ನಿದರ್ಶನಗಳನ್ನು ಕೇಳಿ ಬಹುದು.

ಆಕಾಶದಲ್ಲಿಯ ಕಪ್ಪು ಬಣ್ಣದ ಮೋಡವನ್ನು ನೋಡಿ ಆಗುವ ಆನಂದ ಬೇರೆ ಮೋಡಗಳಿಂದಾಗದು. ಏಕೆಂದರೆ ಕಪ್ಪು ಮೋಡವೇ ಮಳೆಸುರಿಸಬಲ್ಲ ಚೇತನವನ್ನು ಪಡೆದಿದೆ ಆದ್ದರಿಂದ ಪರೋಪಕಾರ, ಜನಸೇವೆ ಆಗುವದು ಹೆಚ್ಚಾಗಿ ಕುರೂಪಿಗಳಿಂದಲೆ!

ಭಗವಂತನ ಮುಖದಿಂದ ಹುಟ್ಟಿದ ಅ ಭಿಕ್ಷುಗಳಲ್ಲಿ ಸೌಂದರ್ಯವೊಂದು. ಮಹಾ ಗಂಡಾಂತರವನ್ನು ಕರಬಲ್ಲ ಭಯಾನಕ ವಸ್ತುವದು. ಸಿಂಹಳ ದ್ವೀಪದ ವೇಲಿ ಪ್ರಳಯಾಂತಕ ಯುದ್ಧವಾಗಿ ಕರ್ದನಾಶನಾಗಲು ಸೀತೆಯ ಸೌಂದರ್ಯವೇ ಕಾರಣವಲ್ಲವೇ? ಉಲ್ಲಾಳದಿಂದ ನಗಾನಗು ತಿದ್ದ ಆಯೋಧ್ಯೆಯನ್ನು ಕಣ್ಣೀರ ಕಡಲಿನಲ್ಲಿ ತೇಲಿಸಿದ್ದು ಕೈಕೇಯಿಯ ಸೌಂದರ್ಯವಲ್ಲವೇ? ಭಾರತದ ಆಕ್ಟ್ಲೋಹಿಣಿ ಜನರು ಹತರಾಗಲು ದ್ರೌಪದಿಯ ಸೌಂದರ್ಯವೇ ಕಾರಣವಲ್ಲವೇ? ಹದ್ಮಿನಿಯು ಮೂಗು ದಪ್ಪವಾಗಿದ್ದರೆ ಭಾರತವು ಅನೇಕ ವೀರರನ್ನು ಕಳಕೊಳ್ಳುತ್ತಿರಲಿಲ್ಲ! ಸಂಯುಕ್ತೆಯು ಕುರೂಪಿಯಾಗಿದ್ದರೆ ಭಾರತವು ಮುಸ್ಲಿಮರ ಪದತಳದಲ್ಲಿ ಬೀಳುತ್ತಿರಲಿಲ್ಲ. ಈ ರಾಜಮಹಾರಾಜರ ವಿಷಯವೇಕೆ? ನಮ್ಮ ಚಿಕ್ಕ ಚಿಕ್ಕ ಕುಟುಂಬಗಳಲ್ಲಾ, ಕೊಲೆ, ಪತ್ತರಗಳಿಗೆ ಈ ಸೌಂದರ್ಯವೇ ಕಾರಣ! ಸೌಂದರ್ಯ ಯಾರಿಗೆ ಹಿತಮಾಡಿದೆ?

'ಯಾರ ಹತ್ತಿರ ಸೌಂದರ್ಯವಲ್ಲದೆ ಬೇರೆ ಯಾವುದೂ ಇಲ್ಲವೋ ಅಂಥಾವನಿಗಿಂತಾ ಭಾಗ್ಯಹೀನ ಬೇರಿಲ್ಲ'ವೆಂದು ಎಡ್ವಿನ್ ಪಗ್ ಎಂಬವನು ಬರೆದಿದ್ದಾರೆ. ನಮ್ಮ ದೇಶದ ವಿಭಜನೆಯಾಯಿತು. ನಂತರ ನಡೆದ ಹತ್ಯಾಕಾಂಡದಲ್ಲಿ ಸುಂದರಿಯರು ಪಟ್ಟ ಕಷ್ಟ ಯಾರಿಗೆ ಗೊತ್ತು? ಅನೇಕ ಕುರೂಪಿಗಳು ಬದುಕಿಕೊಂಡುಬಂದಿದೆ! ಗೋಡೆಯ ಮೇಲೆ ಕೂತವನಿಗೆ ಬೀಳುವ ಭಯವಿನಹ ನೆಲದಲ್ಲಿ ನಿಂತವನಿಗಲ್ಲವೆಂಬಂತೆ ಕುರೂಪತನವು ಎಂದೂ ಕೂಡ ಕಾಯುವ ಅಭಯ ಹಸ್ತದಂತೆ!

ಯಾವ ಮನೆಯಲ್ಲಿ ಸುಂದರಿ ಯುವತಿ ಇರುವಳೋ ಆಕೆಯ ತಂದೆ ತಾಯಿಯರಿಗೆ ಶಾಂತಿ ಇಲ್ಲ ಆಕೆಗೂ ಕೂಡ ಭಯವೇ! ಯಾರದ್ದಾದರೂ ಪತ್ನಿ ಸುಂದರಿಯಾಗಿದ್ದರೆ ಗಂಡನು ನಿಧಿಯ ಹತ್ತಿರದ ಸರ್ಪದಂತಾಗುತ್ತಾನೆ. ಆತನಿಗೆ ಸ್ನೇಹಿತರು ಉಳಿಯಲಾರರು. ಆತನಿಗೆ ಯಾರ ಮೇಲೂ ವಿಶ್ವಾಸವಿರಲಾರದು. ಕುರೂಪಿಯುವತಿಯ ತಂದೆಗೆ ಈ ಚಿಂತೆ ಇಲ್ಲ, ಆಕೆಗೂ ಗಾಬರಿ ಇಲ್ಲ. ಕುರೂಪಿಯು ತನ್ನ ಕೆಲಸ, ವಿದ್ಯೆಯಿಂದ ತನ್ನ ಯೋಗ್ಯತೆಯನ್ನು ಹೆಚ್ಚಿಸಿಕೊಳ್ಳಬೇಕೆಂದು ಪ್ರಯತ್ನಿಸುತ್ತಾಳೆ.

ಪ್ರಕೃತಿಯನ್ನೇ ನೋಡುವಾ. ಹೂವುಗಳು ವಿಕಸಿತವಾಗಿರಲಿ. ಅವುಗಳಲ್ಲಿ ಅತೀ ಸುಂದರವಾದುದರ ಕುತ್ತಿಗೆಗೆ ಮೊದಲು ಕೈಹೋಗುತ್ತದೆ. ಎಲ್ಲಕ್ಕಿಂತಲೂ ಸೌಂದರ್ಯದ ವೈಪರೀತ್ಯಗಳೆಂದರೆ ಹೂವುಗಳು ತಾನೆ! ಆದರೆ ಅವುಗಳೆಲ್ಲವನ್ನು ಕಿತ್ತು ಸೂಜಿಯ ಕಿಲುಬಿಗೆ ಹಾಕಿ ತೂಗುವದರಲ್ಲಿ ನನಗೆ ಆನಂದ! ಪ್ರಕೃತಿಯಲ್ಲಿಯು ಸುಂದರ ದೃಶ್ಯಗಳನ್ನು ಹಿಡಿದು ತಂದಿಡಲು ಅಸಾಧ್ಯವಾದರೂ ಆ ಸುಂದರ ದೃಶ್ಯದ ಮಧ್ಯದಲ್ಲಿ ತನ್ನ ಮನೆ ಕಟ್ಟಲು ಮನುಷ್ಯನು ಯತ್ನಿಸುತ್ತಾನೆ! ಸುಂದರವಾದ ಹಕ್ಕಿಗೆ ಉಳಿಗಾಲವಿಲ್ಲ. ಚಿಟ್ಟೆಗೆ ರಕ್ಷಕರಿಲ್ಲ. ಮೀನು, ಪ್ರಾಣಿಗಳನ್ನು ಕೂಡ ಹಿಡಿದು ತಂದು ಜೈಲಿನಲ್ಲಿಡಲಾಗುತ್ತದೆ.

ವ್ಯಭಿಚಾರ ವೃತ್ತಿಗೂ ಸೌಂದರ್ಯವೇ ಕಾರಣ. ಹಿಂದಿನ ಬಹು ದೂರದ ಕಾಲದ ಕಥೆ. ಸಾಲವತಿ ಎಂಬ ಅದ್ವಿತೀಯ ಸುಂದರಿಯೊಬ್ಬಳು ಇದ್ದಳಂತೆ. ಆಕೆಯನ್ನು ಮುದಂನೆಯೂಗಲು ದೇಶದ ರಾಜನಿಂದ ಹಿಡಿದು ರೈತನವರೆಗೆ ಎಲ್ಲರೂ ಆಶಿಸುತ್ತಿದ್ದರಂತೆ. ಅಂದಿನದು ಸಂಪೂರ್ಣ ಪ್ರಜಾ ಪ್ರಭುತ್ವದ ಕಾಲ ಈ ಪತಿವ್ರತೆಯನ್ನು ಬಗೆಬಗೆಸಲು ತರ್ಕವಿತರ್ಕವಾಗಿ ಆಕೆಯಂಥಾ ಸುಂದರಿಯು ಒಬ್ಬನ ವಸ್ತುವಾಗಿರದೆ ದೇಶೀಯರೆಲ್ಲರ ವಸ್ತುವಾಗಿರಬೇಕೆಂದು ನಿರ್ಣಯವಾಗಿ ಸಾಲವತಿಯೇ ವೇಶ್ಯಾವೃತ್ತಿಗೂ ಕಾರಣವಾಯಿತ!

ಸುಂದರಿಯಾದವಳು ತನ್ನ ಶೃಂಗಾರ ವಸ್ತು ಬಾಹ್ಯಾಚಾರದಲ್ಲೇ ನಿರತಳಾಗಿದ್ದು ಆಕೆಯ ಹೃದಯ ಬೆಳೆಯಲು ಅವಕಾಶವಿರದಿದ್ದಾಗಿ ಕುರೂಪಿಯಾದವಳು ತನ್ನ ಹೃದಯವನ್ನು ಬೆಳೆಸಿಕೊಳ್ಳಲು ಅವಕಾಶವಿರುತ್ತದೆ. ಅದರಿಂದ ಕುರೂಪಿಗಳಿಗೆ ಹೊರಗೆ ಹೇಳಿಕೊಳ್ಳಲು ಏನೂ ಇಲ್ಲದ ಕಾರಣ ಒಳಗಿನ ಗುಣಗಳನ್ನು ಹೆಚ್ಚಿಸಲು ಯತ್ನಿಸುತ್ತಾರೆ. ಸುಂದರಿಗೆ ಪತಿಯು ಸೇವೆ ಶಿಶ್ರೂಷೆ ಭಕ್ತಿಯು ಕೆಲಸವಲ್ಲ. ಕುರೂಪಿಯು ತನ್ನ ಗುಣ ನಡತೆಗಳಿಂದ ಪತಿಯನ್ನು ಒಲಿಸಲು ಪ್ರಯತ್ನಿಸುತ್ತಾಳೆ ಸುಂದರಿಯು ಸೌಂದರ್ಯ ಸಹಾಯಕ ಶೃಂಗಾರ ವಸ್ತುಗಳ ಭಾರವು ಬಡಪತಿಯನ್ನು ಕೊಲೆಮಾಡುತ್ತದೆ. ಏಕೆಂದರೆ ಸೂಟಿನ ಜೊತೆಗೆ ಟೈಯ ರಂಗು ಹೇಗೆ ಹೋಲಬೇಕೋ ಆದೇರೀತಿ ಸೌಂದರ್ಯದ ಜೊತೆಗೆ ಶೃಂಗಾರ ಬೇಕು! ಆದರೆ ಕುರೂಪಿಗೆ ಶೃಂಗಾರವೆಂದರೆ ವಿಪತ್ತು. ಆಕೆಯು ಗುಣಗಳಖನಿಯಾಗುತ್ತಾಳೆ. ಆಕೆಯ ಪತಿಯು ಭಾಗ್ಯವಂತನೆನಿಸುತ್ತಾನೆ!

ಪ್ರೇಮದ ದೃಷ್ಟಿಯಲ್ಲಿ ಕೂಡ ಕುರೂಪಿಯು ಪ್ರೇಮ ವಿರ್ವಂಚನೆಯಿದು. ಸೌಂದರ್ಯ ಅಸ್ಥಿರ ಹೇಗೋ ಹಾಗೆ ಸೌಂದರ್ಯವತಿಯ ಪ್ರೇಮವೂ ಕೂಡ. ಉರಿಯುವ ದೀಪದ ಸೌಂದರ್ಯಕ್ಕೆ ಮನಸೋತ ಪತಂಗಗಳು ಅದಕ್ಕೆರಗಿ ರೆಕ್ಕೆ ಸುಟ್ಟುಕೊಂಡು ಸಾಯುವವು. ಕಮಲದ ಸೌಂದರ್ಯ ರಸದಲ್ಲಿ ಮಗ್ನವಾದ ಭ್ರಮರವು ಅವರೊಳಗೇ ಬಂಧಿಯಾಗುವುದು. ಸೌಂದರ್ಯದಲ್ಲಿ ಕೃತಜ್ಞತೆಯ ಬದಲು ಕೃತಘ್ನತೆಯೇ ಹೆಚ್ಚು.

ಯಾವ ರೀತಿ ವಿತ್ತರನ್ನೂ ಸಂಬಂಧಿಕರನ್ನು ಅಳೆಯಲು ಹೊಸ್ತಿವು ಸಹಾಯಕವಾಗುವುದೋ ಅದೇ ರೀತಿ ಕುರೂಪವು ತನ್ನನ್ನು ಮೆಚ್ಚುವವರನ್ನು ಗುರುತಿಸುವದು. "ಮನುಷ್ಯನು ಸೌಂದರ್ಯದ

ಜೆನ್ನು ಹಿಗಿವಿಸ್ಪರೆ ಅತನಿಗೆ ಆ ಘರೆಗೆ ಪರಿಷ್ಕೃತ ಹೃದಯವುದ ಸಹಚೋಗವಾಗಿಲ್ಲ ವೆಂದು ತಿಳಿ" ಎಂಬುದಾಗಿ ಪ್ರೇಮಚಂದ್ರರು ಹೇಳಿದ್ದಾರೆ. "ಸೌಂದರ್ಯ ಮನುಷ್ಯನ ಮಹಾದುರ್ಬಲತೆ" ಎಂದು ಆರಿಸ್ಟಾಟಲನು ಹೇಳಿದ್ದಾನೆ ಅದರ ಮುಂದೆ ಎಲ್ಲಾ ಸಂಯಮ, ಧರ್ಮ ಭಾವನೆಗಳು ಲುಪ್ತವಾಗುತ್ತವೆ.

ಈ ಕಾರಣಕ್ಕಾಗಿಯೇ ಸೌಂದರ್ಯವನ್ನು ಯುದ್ಧ ಸಮಯಗಳಲ್ಲಿ ಪಂಚಮದಳವಾಗಿ ಉಪಯೋಗಿಸಿ ವಿರೋಧಿಗಳ ಗುಟ್ಟನ್ನು ತಿಳಿಯುತ್ತಾರೆ. ಸೌಂದರ್ಯದ ಒತ್ತಳಿಕೆಯಿಂದ ಬಿಟ್ಟ ಬಾಣದಿಂದ ಬದುಕುವ ಸೌಭಾಗ್ಯ ಈ ಜಗತ್ತಿಗೆ ಯಾರಿಗೂ ದೊರೆತಿಲ್ಲವೆನ್ನಬೇಕು. ಬ್ರಹ್ಮ, ಇಂದ್ರರಂಥಾ ದೇವತೆಗಳು ಪಾರಾಗಲಿಲ್ಲ. ನಾರದನಂಥಾ ಋಷಿಗೇ ಸಾಧ್ಯವಾಗಲಿಲ್ಲ. ಪುರಾಣ ಕಾಲದಲ್ಲಿ ಭೀಷ್ಮನೊಬ್ಬನು ಈ ಬಾಣದಿಂದ ಪಾರಾದನು. ಆಧುನಿಕ ಚರಿತ್ರೆಯಲ್ಲಿ ಶಿವಾಜಿಯೊಬ್ಬನು! ಆದರೆ ಇದು ಲೆಕ್ಕಕ್ಕಿಲ್ಲದ ಅಲ್ಪ ಪಕ್ಷ.

'ಯಾರು ಸೌಂದರ್ಯದಿಂದ ವಿವಶರಾಗುವದಿಲ್ಲವೋ ಅವರೇ ಜಯಮಾಲೆಯನ್ನು ಧರಿಸಬಲ್ಲರು. ಸೌಂದರ್ಯವು ಸುರಭೂಮಿಯ ಸರೋವರದಂತೆ ಕ್ಷಣಕ್ಷಣಕ್ಕೂ ವೇಷ ಮಾಡಿ ಮನುಷ್ಯನನ್ನು ಮೂರ್ಖನನ್ನಾಗಿ ಮಾಡುತ್ತದೆ' ಎಂದು ಡಾಯಿಡನ್ ಎಂಬವರು ಹೇಳಿದ್ದಾರೆ.

ಮೂರ್ಖ ಮನುಷ್ಯನು ಯಾವದೇ ಬಟ್ಟೆ ಧರಿಸಿದರೂ ಮೂರ್ಖನೆಂದೇ ಕರೆಸಿಕೊಳ್ಳುವಂತೆ ಸೌಂದರ್ಯವು ಎಷ್ಟೇ ಮನೋಹರವಿರಲಿ ಅದು ಭಯಂಕರವೇ! ಹೂವುಗಳಲ್ಲಿ ಸುಂದರವೆನಿಸುವವೆಷ್ಟಿಲ್ಲ? ಒಬ್ಬ ಕವಿ ಹೇಳಿದಂತೆ "ಚೆನ್ನನ ಸಂಪಣಿಯಿಂದ ಕಟ್ಟಿದರೂ ಸಾಯಿ ಸಾಯಿಯೇ".

ಸೌಂದರ್ಯವು ಒಬ್ಬ ಸಮಯುಷಕನ ಹೃದಯದ ಮೇಲೆ ಎಂಥ ಪ್ರಭಾವವನ್ನು ಬೀರುತ್ತದೆಂಬುದೆ ಅತನು ತನ್ನನ್ನು ಸಲಹಿದ ತಂದೆಯನ್ನು, ಹೆತ್ತ ಹೆಂತ್ತ ಸಾಕಿದ ತಾಯಿ ಮನ್ನು ಕಡೆಗಣಿಸಿ ಬಿಡುವದು ಆದ್ದರಿಂದ ಸೌಂದರ್ಯವು ಮಾತ್ರ ನಿರೋಧಿಯೇ ಅಲ್ಲ, ಪಿತೃವಿರೋಧಿಯೂ ಹೌದು.

ಕುರೂಪತನವು ಬ್ರಹ್ಮಚರ್ಯ, ಸಂಯಮಗಳಿಗೆ ಸಹಜ ಮಾರ್ಗ. ಸೌಂದರ್ಯವಿರುವವರು ರಕ್ಷಣೆಯನ್ನು ಭಗವಂತನೂ ಕೂಡ ಮಾಡಲಾರನು! ಕಾಮ, ಮದ ಮತ್ಸರ ಮೋಹ ಇವು ಸೂರು ಮನುಷ್ಯನ ಶತ್ರುಗಳು. ಇವುಗಳನ್ನು ಜೈಸಲು ಕುರೂಪತನಕ್ಕೆ ಸೂತ್ರ ಸಾಧ್ಯ. ಏಕೆಂದರೆ ಸೌಂದರ್ಯವು ಇವುಗಳನ್ನು ಬೆಳೆಸಿ ತೋರಿಸುವ ವಸ್ತು. ಕವಿ, ಲೇಖಕ ಅಥವ ಚಿತ್ರಕಾರರಿಗೆ ಏಕಾಂತ ಅವಶ್ಯಕ. ಅಂಥಾವರು ಮದಾಂಧರಾಗಿ ಈ ಕಲೆಗಳನ್ನು ಮುಂದರಿಸಬೇಕಾದರೆ ಅವರಿಗೆ ಕುರೂಪಿ ಹೆಂಡತಿಯೇ ಬೇಕು. ಸೌಂದರ್ಯವತಿ ಹೆಂಡತಿ ದೊರೆತರೆ ಆತನ ಕಲೆಯು ಅವಸಾನವಾಗುವುದು. ಆದ್ದರಿಂದಲೇ "ನೀನು ಯಾವದೇ ಸಲಿನಾಕ್ಷಿಯ ಮೋಹದ ಒಲೆಯಲ್ಲಿ ಸಿಕ್ಕಿಲ್ಲವಾದರೆ ಕಲ್ಪನಾ ಆಕಾಶದಲ್ಲಿ ಮಹಾ ಎತ್ತರಕ್ಕೆ ಹಾರಬಲ್ಲೆ' ಎಂದು ಕವಿ ಹೇಳಿರುವದಾಗಿದೆ.

ಸೌಂದರ್ಯವ ಪೂಜೆ ಮಾಡಿ ಜಗತ್ತು ಎಲ್ಲಿಗೂ ತಲಪಿದಂತೆ ತೋರುವದಿಲ್ಲ. ಬದಲು ಹಿಂದುಡಿ ಇಡುತ್ತಿದೆಯೋ ಎಂಬ ಸಂಶಯ ಒಮ್ಮನಸ್ಸಿಗೆ ತೋರುತ್ತದೆ. ಮುಂದೆ ಕುರೂಪತನದ ಪೂಜೆ ನಡೆಯಲಿ. ಬಹುಶಃ ಆದ್ದರಿಂದ ವ್ಯಕ್ತಿಗೆ ಸುಖವೂ, ಕುಟುಂಬಕ್ಕೆ ಪ್ರಗತಿಯೂ, ದೇಶಕ್ಕೆ ಶಾಂತಿಯೂ ದೊರೆಯಬಹುದು.

(ಆಧಾರದಿಂದ)

ಹ ರಾ ಜ್ಞೆ.

ಮಿ. ಜಾರ್ಜ್ ಸ್ಕಾಟ್ ಲೇಂಡರಿಗೆ ಸೇರಿದ ಮರಮಟ್ಟು ಮತ್ತಿತರ ಸಾಮಾನುಗಳು ತಾರೀಕು ೨೨-೧-೫೦ ನೇ ಆದಿತ್ಯವಾರ ಬೆಳಿಗ್ಗೆ ೧೦-೩೦ ಗಂಟೆಗೆ ಸಿದ್ದಾಪುರದ ಎಲ್ಕ್‌ಹಿಲ್ ಬಂಗ್ಲೆಯಲ್ಲಿ ಸಾರ್ವಜನಿಕ ಹರಾಜಿನಲ್ಲಿ ಮಾರಲ್ಪಡುವವು.

A PUBLIC AUCTION

Of the furniture and effects belonging to Mr. George scotland will be held at Elk Hill Bungalow Sidapur on sunday 22nd January 1950 at 10-30 a. m.

ನೋಟೀಸು.

ಕೊಡಗು ಮಾಜಿ ಸಿಪಾಯಿಗಳ ಸಂಘವು ವೀರಾಜಪೇಟೆಯಲ್ಲಿ ಸ್ಥಾಪಿತವಾಗಿದೆ. ಕೊಡಗಿನ ಎಲ್ಲಾ ಮಾಜಿ ಸಿಪಾಯಿಗಳು ರೂಪಾಯಿ ಒಂದನ್ನು ಈ ಕೆಳಗೆ ಸಹಿ ಮಾಡಿದವರಿಗೆ ಕಳುಹಿಸಿ ಮೆಂಬರಾಗಬೇಕಾಗಿ ಈ ಮೂಲಕ ತಿಳಿಸಿಕೊಳ್ಳಲಾಗಿದೆ. ಕೊಡಗಿನ ಎಲ್ಲಾ ಮಾಜಿ ಸಿಪಾಯಿಗಳ ಆರ್ಥಿಕ, ನೈತಿಕ ಅಭಿವೃದ್ಧಿಗಾಗಿ ಈ ಸಂಘವನ್ನು ಸ್ಥಾಪಿಸಿದ್ದಾಗಿದೆ. ಆದ್ದರಿಂದ ಈ ಸುಸಮಯವನ್ನು ಯಾರೂ ಕಳೆದುಕೊಳ್ಳಬಾರದು.

ಯೆನ್. ಬಿ. ಉತ್ತಪ್ಪ,
ಪ್ರೆಸಿಡೆಂಟ್,
ಕೊಡಗು ಮಾಜಿ ಸಿಪಾಯಿಗಳ ಸಂಘ.

5-1

ಪ್ರ ಕ ಟ ಣೆ.

ಕೊಡಗು ಮಾಜಿ ಸಿಪಾಯಿಗಳ ಸಹಕಾರ ಟ್ರಾನ್ಸ್‌ಪೋರ್ಟ್ ಸಂಘವನ್ನು ಕೊಡಗು ಮಾಜಿ ಸಿಪಾಯಿಗಳ ಸಂಘದ ಶಾಖೆಯಾಗಿ ಮಡಿಕೇರಿಯಲ್ಲಾ ತೆರೆಯಲು ತೀರ್ಮಾನಿಸಲಾಗಿದೆ. ಶೇರು I ರೂ. 10/- ಗಳಂತೆ ಪ್ರತಿ ಒಬ್ಬ ಮೆಂಬರನ್ನು ಶೇರು ಹೊಂದಿಕೊಳ್ಳಬಹುದು. ಆದರೆ ಒಬ್ಬನಿಗೆ ನೂರು ಶೇರುಗಳಿಗಿಂತ ಹೆಚ್ಚು ಶೇರುಗಳನ್ನು ಕೊಡಲಾಗುವುದಿಲ್ಲ. ಮೆಂಬರುಗಳು ಈ ಕಳಗೆ ರುಜು ಮಾಡಿದವರಿಗೆ ಮನಿಯೂರ್ಡರ್ ಮೂಲಕ ಹಣ ಕಳುಹಿಸತಕ್ಕದ್ದು. ಸರ್ಕಾರಿ ಉದ್ಯೋಗಸ್ಥರೂ ಮೆಂಬರುಗಳ್ನಾಗಿ ಸೇರ್ಪಡಬಹುದು. ಪಾನತಿಯೂಪ ಮೊಬಲಗಿಗೆ ತತ್ಕಾಲದ ರಸೀತಿ ಕೊಡಲಾಗುವುದು. ಸಂಘವು ರಿಜಿಸ್ಟರ್ ಆಗುನಂತರ ಮೆಂಬರುಗಳ ಹೆಸರುಗಳನ್ನು ರಿಜಿಸ್ಟರ್ ಮಾಡಲಾಗುವುದು.

ಯೆನ್. ಬಿ. ಉತ್ತಪ್ಪ
ಪ್ರೆಸಿಡೆಂಟ್,
ಕೊಡಗು ಮಾಜಿ ಸಿಪಾಯಿಗಳ ಸಂಘ.

ಗ ಮ ನಿ ಸಿ ರಿ!

ದಿನವಹಿ ಹೆಚ್ಚುತ್ತಿರುವ ಗ್ರಾಹಕರ ಬೇಡಿಕೆಯನ್ನು ಸಲ್ಲಿಸಲು ನಮ್ಮ ಅಂಗಡಿಯನ್ನು ವಿಸ್ತರಿಸಿರುವದಲ್ಲದೆ ಆತ್ಯಾಪ್ತವಾದ ಸಿಲ್ಕ್, ಉಲನ್ ಮತ್ತು ಮಿಲ್ ಬಟ್ಟೆಗಳ ಯಥೇಚ್ಛ ಸ್ಟಾಕ್ ಇಡಲಾಗಿದೆ.
ಯಾವ ಸಮಾನೆಯು ಬಟ್ಟೆಗೂ ಆದರ್ಶವೆನಿಸಿದೆ.
ಆರ್ಡರ್ ಪ್ರಕಾರ ಅತೀ ಆಧುನಿಕ ಟೀತಿಯಲ್ಲಿ
ಉಡುಪುಗಳನ್ನು ಹೊಲಿದು ತಯಾರಿಸಿ
ಕೊಡಲಾಗುವದು.

ಬಟ್ಟೆಯ ವಿಚಾರದಲ್ಲಿ ಏನು ಬೇಕು! ಪಟ್ಟೊ ಬ್ರದರ್ಸ್ ಎಕ್ಸಿಡ ಕೈ!

ಪಟ್ಟೊ ಬ್ರದರ್ಸ್,
ಲಕ್ಷ್ಮೀ ಬಿಲ್ಡಿಂಗ್ಸ್,
ಟೌನ್‌ಹಾಲಿನ ಎದುರು, ಮೈಸೂರು.

ಬ ಟ್ಟ ಬೇಕೆ?

ಮದುವೆ ಸಮಾರಂಭಗಳಿಗೆ ಬೇಕಾದ ನಾನಾ ರೀತಿಯ ಬೆಂಗಾಲ್ ಬೆನಾರಿಸ್ ಸಿಲ್ಕುಗಳು, ಸೇಲಂ, ಮಧುರಾ ಜವುಳಿಗಳು, ಉತ್ತಮ ಉಲನ್ ಬಟ್ಟೆಗಳು ಕಳೆದ ವರ್ಷದ ಬೆಲೆಗಿಂಥಾ ಶೇಕಡ ೫೦% ರಷ್ಟು ಕಡಿಮೆ ದರದಲ್ಲಿ ದೊರೆಯುವವು.

ಆತ್ಯುತ್ತಮ ಮೂದರಿಯು ಬನಾರಿಸ್ ಮತ್ತು ಕಾಶ್ಮೀರ್ ದಟ್ಟಿಗಳು ಸದಾ ದೊರೆಯುವವು.

ನಾನೂರು ರೂಪಾಯಿಗಳಿಗೆ ಮೇಲ್ಪಟ್ಟ ಒಟ್ಟಿ ತೆಗೆಯುವವರು ಈ ಪತ್ರಿಕೆಗೆ ತಿಳಿಸಿದಲ್ಲಿ ಅವರವರ ಮನೆ ಬಾಗಿಲಿಗೆ ತಂದು ಸರಬರಾಯಿ ಮಾಡಲಾಗುವದು.

ಒಮ್ಮೆ ಬಾಮು ಪರೀಕ್ಷಿಸಿರಿ.

ವಲ್ಲಿ ಮೊಹಿದಿನ್ ಸಾಹೇಬ್ & ಬ್ರದರ್,
ಸಿಲ್ಕ್ ಮತ್ತು ಕಾಟನ್ ವ್ಯಾಪಾರಿಗಳು.
ವೀರಾಜಪೇಟೆ (ಕೊಡಗು)

12-1

ಭದ್ರತೆ! 17 ವರ್ಷಗಳ ಪರಿಪಕ್ವ ಅನುಭವಶೀಲತೆ!! ಅನುಕೂಲತೆ!!

ದಿ ವಿಜಯ ಬ್ಯಾಂಕ್ ಲಿಮಿಟೆಡ್

ಮುಖ್ಯ ಕಛೇರಿ,
ಕದ್ರಿ ರೋಡ್, ಮಂಗಳೂರು.

ನಿರಖು ತೇವಣಾತಿ ಬಡ್ಡಿದರ:-

3	ತಿಂಗಳು	3%
6	,,	3½%
12	,,	3¾%
24	,,	4 %

ರೂಪಾಯಿ ೧೫,೦೦೦ಕ್ಕೆ ವಿಸ್ತರಿಸಿದ ಒಂದೇ ನಿಷ್ಕಾರ್ಷಣೆಗೆ ಮೇಲಿನ ದರಕ್ಕಿಂತ ಶೇ ¼% ಹೆಚ್ಚಿಗೆ.

ಶಾಖೆಗಳು:- ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾನರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮಿಗಿಲಿದೆ.

ಎಲ್ಲಾ ವಿಧದ ಆಧುನಿಕ ಬ್ಯಾಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:- ಪಿ ಜಂ ಟ್,
ಮಡಿಕೇರಿ ಶಾಖೆ, ಮಡಿಕೇರಿ.

ಕೊಡಗು

ತಾ. ೬-೧-೧೯೫೦ನೇ ಶುಕ್ರವಾರ

ಹೊಸ ವರ್ಷ.

೧೯೪೯ ಕಾಲವಾಹಿನಿಯಲ್ಲಿ ವಿಲೀನವಾಗಿ ೧೯೫೦ಕ್ಕೆ ಕಾಲಿಟ್ಟಿರುವೆವು. ಈ ಹೊಸ ವರ್ಷಕ್ಕೆ ಕಾಲಿಕ್ಕುವಾಗ ನಮ್ಮ ಭರತಖಂಡಕ್ಕೆ ಇರುವ ಹೊಸ ರಾಜ್ಯಘಟನೆಯನ್ನು ತಯಾರಿಸಿಕೊಂಡು ಸಿದ್ಧರಾಗಿರುವೆವು. ಈ ತಾರೀಕು ೨೬ ರಂದು ನಮ್ಮ ದೇಶವು ಸರ್ವ ಸ್ವತಂತ್ರ ಜನತಾರಾಜ್ಯವಾಗಿ ನಾವು ರೂಪಿಸಿರುವ ನವರಾಜ್ಯ ಶಾಶನಗಳು ಅಂದಿನಿಂದ ಜಾರಿಗೆ ಬರುವವು. ಹೊಸ ರಾಜ್ಯ ಶಾಶನ ಜಾರಿಗೆ ಬಂದರೆ ಸರ್ವ ಕೆಲಸ ಆವಂತಿ ಆಗಲಾರದು. ಜನಸಾಮಾನ್ಯರಲ್ಲಿ ಸ್ವಲಪಳಿಕೆಯು ಹೊಸ ಗಾರಿಕೆ, ಜ್ಞಾನ, ಜಾಗೃತಿ ಮತ್ತು ವಿಚಾರಬುದ್ಧಿ ಸಾಕಷ್ಟು ತೋರಿಬಾರದಿದ್ದರೆ ಈ ನವರಾಜ್ಯ ಶಾಶನಗಳು ಕಾಗದದಲ್ಲೇ ಉಳಿಯಬಹುದು; ಇಲ್ಲವೇ ಸುರುಪಯೋಗವಾಗಬಹುದು. ಯಾವ ರಾಜ್ಯಘಟನೆ ಜಾರಿಯಲ್ಲಿ ಬಂದರೂ ಅನನ್ನು ವಿನುರ್ತಿಸಿ ಆವರ ಸಿಹಿಕಹಿಗಳನ್ನು ತಿಳಿದುಕೊಳ್ಳದಿದ್ದರೆ ಜನತೆಯು ಪಾಲಿಗೆ ಅದು ಅರ್ಥರಹಿತವಾಗುವದು. ಸಾರ್ವಜನಿಕರು ರಾಜಕೀಯದಲ್ಲಿ ಅಜ್ಞಾನಿಗಳಾಗಿ, ಸರಕಾರವು ಮೂಡುತ್ತಿರುವವರ ಬಗೆಗೆ ತಿಳಿವಿಲ್ಲದವರಾಗಿ ಅಂಧಕಾರದ ಮಬ್ಬಿನಲ್ಲಿ ಮುಂಕರಾಗಿ ಉಳಿದರೆ ಸ್ವರಾಜ್ಯ ಸಂಸ್ಥಾಪನೆಗೂ ಅರ್ಥವಿಲ್ಲ. ನವರಾಜ್ಯ ಶಾಶನಕ್ಕೂ ಬೆಲೆ ಇಲ್ಲ. ಮನೆಯವರೆಲ್ಲರೂ ಕಾಯಲಕ್ಷ್ಮರಾಗಿ ಹಾಸಿಗೆ ಹಿಡಿದಿರುವಾಗ ಅಡಿಗೆ ಮನೆಯಲ್ಲಿ ಮೃಷ್ಟಾನ್ನಭೋಜನವಿದ್ದೇನು ಫಲ? ಅವರಂತೆ ಜನತೆಯಲ್ಲಿ ಅಜ್ಞಾನ, ಅಂಧಕಾರ ತುಂಬಿರುವಾಗ ದೆಲ್ಲಿಯ ಪಾಕಶಾಲೆಯಲ್ಲಿ ಯಾವ ಘಟನೆಯೂ ಪರೂ ಹೆಚ್ಚಿನ ಪ್ರಯೋಜನವಿರಲಾರದು.

ಸರ್ವರು ಅಪೇಕ್ಷಿಸಿದಂತೆ ಭಾರತಕ್ಕೆ ಸ್ವರಾಜ್ಯ ಬಂತು. ಸ್ವರಾಜ್ಯ ಬಂದುದರಿಂದ ಏನೆಲ್ಲ ಆಗಬೇಕಿತ್ತೋ ಆಯಿತೆ? ಸ್ವರಾಜ್ಯವೆಂದರೆ ಬಿಳಿ ಜನರ ಕೈಯ ಅಧಿಕಾರವು ಭಾರತೀಯರಿಗೆ ಬರುವುದೇ ಏನ? ಭಾರತೀಯರ ಕೈಗೆ ಬಂದಿರುವ ಸ್ವರಾಜ್ಯವು ಜನ ಸಾಮಾನ್ಯರ ಕೈಗೆ ಬರಬೇಕು. ಅದು ಬರಬೇಕಾದರೆ ಜನ ಜಾಗೃತಿಯಾಗಬೇಕು.

ಇಂದು ಸ್ವತಂತ್ರ ಭಾರತದಲ್ಲಿ ನಡೆದಿರುವ ಆವಳಿತವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಕೆಲವೊಂದು ಸ್ವಾರ್ಥತ್ಯಾಗಿಗಳನ್ನು ಬಿಟ್ಟರೆ ಬಹು ಸಂಖ್ಯೆಯವರೆಲ್ಲರೂ ಸ್ವಾರ್ಥ, ಸಂಕುಚಿತ ಭಾವ, ಅಜ್ಞಾನ, ಅನಾರೋಗ್ಯ, ದೌರ್ಬಲ್ಯ ಮುಕ್ತು ಅಶಕ್ತಾದಿಗಳಿಗೊಳಗಾಗಿ ಕೊಂದ್ರು ನತ್ತು, ಪ್ರಾಂತಗಳಲ್ಲಿ ಒಂದು ವಿನವ ಅಂಧಪೂರ್ಣದಲ್ಲಿ ಸಾಗುತಿದ್ದಾರೆಂದು ಹೇಳಬಹುದು. ಹೀಗಾಗಲು ಕಾರಣವೇನಿರಬಹುದು? ಒಂದೆ ಮಾತಿನಲ್ಲಿ ಹೇಳಬೇಕಾದರೆ ಸಾಕಷ್ಟು ಜನಜಾಗೃತಿ ಇಲ್ಲವಿರುವದು! ಜನತೆ ಜಾಗೃತಗೊಂಡಿದೆ. ಕಾವು ಮಾಡುವದೆಲ್ಲವೂ ಜನಕ್ಕೆ ತಿಳಿಯುತ್ತದೆ. ಕ್ರಮಶಃ ನಾವು ನಮ್ಮ ಕರ್ತವ್ಯಗಳಿಗಾಗಿ ಅವರಿಗೆ ಉತ್ತರ ಕೊಡಬೇಕಾಗುತ್ತದೆ. ಎಂಬ ಸಂಗತಿ ಆಧಿಕಾರಿಗಳಿಗೆ ಮಂದಟ್ಟಾಗುತ್ತಿದ್ದರೆ ಆಧಿಕಾರಿಗಳೂ, ಜನಮುಖಂಡರೂ ಸ್ವಾರ್ಥ, ವಂಚನೆಗಳನ್ನು ಮಾಡಲು ಹಿಂಜರಿಯುತ್ತಿದ್ದರು. ಆದರೆ ಇಂದು ಜನರ ಅಭಿಪ್ರಾಯವನ್ನು ಕೇಳುವವರಾರು? ತಮ್ಮ ಆಭಿಪ್ರಾಯವು ನಡೆಯುವಂತೆ ಒತ್ತಾಯ ಮಾಡುವ ಶಕ್ತಿ ಮತ್ತು ಜಾಗೃತಿ ಜನಸಾಮಾನ್ಯಕ್ಕೆ ಬಂದಿಲ್ಲ. ಈ ಜನಜಾಗೃತಿ ಆಗದಿದ್ದರೆ ಜನತಾ ರಾಜ್ಯ, ಪ್ರಜಾಪ್ರಭುತ್ವ ಕೆಲವೊಂದು ಜನರ ಕೈಗೊಂಬೆಯಾಗಿಯೇ ಉಳಿಯುವದು.

ನಿನ್ನೆ ಅಂದರೆ ೧೯೪೯ನೇ ಆಗಷ್ಟ ೧೫ರಲ್ಲಿ ಸ್ವಾತಂತ್ರ್ಯ ಬಂತು. ಆ ಕಾರಣದಿಂದಲೇ ಭರತಖಂಡದ ಜನ ಜೀವನಕ್ಕೆ ಒಂದು ಪೂರ್ಣತೆ ಬರಲಿಲ್ಲ ಹಿಂದಿನಂತೆ ಇಂದೂ ಬಹುತನ, ಅಜ್ಞಾನ, ಕಷ್ಟ ನಿಷ್ಠುರಗಳು ಇವೆ. ಅದರಂತೆ ನಾಳೆ ಭಾರತವು ರಿಪಬ್ಲಿಕ್ ಆವನಂತರವೂ ಪರಿಸ್ಥಿತಿಯೇನೂ ಮಿಂಚಿನ ವೇಗದಂದ ಬದಲಾಗುವಂತಿಲ್ಲ. ಬದಲಾಗಬೇಕಾದರೆ ಅದು ಜನಜಾಗೃತಿಯೊಂದಿಗೆ ಬದಲಾಗುವದು. ಜನತೆಯು ಇಂದಿನಂತೆಯೇ ಬಡತನ, ಅಜ್ಞಾನಗಳಿಂದ ನರಳುವದಾದರೆ ಭಾರತವು ರಿಪಬ್ಲಿಕ್ ಆಗಿ ನೂರು ವರ್ಷ ವಾದರೂ ಪರಿಸ್ಥಿತಿ ಸುಧಾರಿಸದು. ಆದ್ದರಿಂದ ದೇಶದ ಉನ್ನತಿ ಮತ್ತು ಅವನತಿ ಜನಜಾಗೃತಿಯನ್ನು ಹೊಂದಿಕೊಂಡಿದೆ

ಜನತೆಯು ಇಂದು ಅಜ್ಞಾನ, ಅಂಧಕಾರ, ವಿವಿಧ ಅಭಾವಗಳಿಂದ ನರಳುತ್ತಿರಲು ಅವರ ಆರ್ಥಿಕ ಸ್ಥಿತಿ ಸುಧಾರಿಸದಿರುವುದೇ ಪ್ರಬಲ ಕಾರಣ. ಅವರ ಆರ್ಥಿಕ ಸ್ಥಿತಿ ಸುಧಾರಿಸಬೇಕಾದರೆ ಯೋಗ್ಯ ಕಾರ್ಯ ಕೈಕೊಳ್ಳುವವರು ಸರಕಾರವು ಜವಾಬ್ದಾರಿ ಹೊರಬೇಕು. ಭಾರತದ ಇಂದಿನ ಸ್ವಾತಂತ್ರ್ಯ ಯುಗದಲ್ಲಿ ಭಾರತೀಯನಿಗೆ ಬಂದಿರುವ ಅಮೂಲ್ಯ ಸ್ವಾತಂತ್ರ್ಯವೆಂದರೆ ಮತದಾನದ ಸ್ವಾತಂತ್ರ್ಯ ಈ ಮತದಾನದ ಆಡಿಗಟ್ಟಿನಲ್ಲೇ ಮುಂದಿನ ಆಡಳಿತ ನಿಲ್ಲುತ್ತದೆ. ಆದ್ದರಿಂದ ತಮ್ಮ ಅಮೂಲ್ಯವಾದ ಈ ಮತದಾನವನ್ನು ತಮ್ಮ ಹಾಗೂ, ರಾಷ್ಟ್ರದ ಹಿತದೃಷ್ಟಿಯಿಂದ ಉಪಯೋಗಿಸುವ ಜಾಣ್ಮೆಯನ್ನಿಗೆ ಬರುವಂತೆ ಪ್ರಯತ್ನಿಸಲು ಪ್ರಯತ್ನಿಸಬೇಕು. ನವ ಸರಕಾರದಲ್ಲಿ ಜ್ಞಾನದ ಬೆಳಕು ಇನ್ನೂ ಹೆಚ್ಚು ಪ್ರಕಾಶವಾಗಿ ಬೆಳಗಿ ಅಂಧಕಾರ ಕವಿದಿರುವ ಬಡ ಗುಡಿಸಲನ್ನು ಬೆಳಗಿಸುವ ಕಾರ್ಯಕ್ಕೆ ತನ್ನ ಕೈಲಾದ ಪ್ರಯತ್ನವನ್ನು ಮಾಡಲು "ಕೊಡಗು" ಕಟಿಬದ್ಧವಾಗಿ ಪ್ರಯತ್ನಿಸುವದು.

ಮತದಾನ.

ವೈಶಾಲಿ ಮಹಾರಾಣಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಮಿಸ್. ಎಂ. ತಂಗಮ್ಮ ಸುಬ್ಬಯ್ಯನವರಿಗೆ ತಾರೀಕು ೧೪-೧೨-೪೯ರಲ್ಲಿ ನಡೆದ ಒಲಂಪಿಯಾ ಆಟೋಟಗಳಲ್ಲಿ ಸಾಲ್ಮ್ಯ ಬೆಳ್ಳಿಯ ಕಪ್ಪುಗಳು ದೊರೆತವೆಂದು ತಿಳಿಯುತ್ತೇವೆ.

ಕೊಡಗು ನ್ಯಾಯವಿಧಾಯಕ ಸಭೆಯ ವಿಶೇಷ ವಿಂಟಿಂಗೊಂದನ್ನು ತಾ. ೧೨-೧-೫೦ನೇ ಗುರುವಾರ ಬೆಳಿಗೆ ೧೧ ಗಂಟೆಗೆ ಕಚೇರಿಯಲ್ಲಿ ಸೇರಿ

ತಾರೀಕು ೨೩-೧೨-೪೯ರಲ್ಲಿ ಪೊನ್ನಂಪೇಟೆ ಗ್ರಾಮ ಪಂಚಾಯಿತ ಸಭೆಗೆ ಶ್ರೀಗಳಾದ ಎಂ. ಎ ಪೂವಯ್ಯ, ಎ. ಎಸ್. ತಮ್ಮಯ್ಯ, ಕೆ. ಎಸ್. ನಾಗರಾಜ, ಎಸ್. ಎಸ್. ಮುತ್ತಣ್ಣ, ಎಂ. ಡಿ. ಕುಶಾಲಪ್ಪ, ಪಿ. ಆರ್. ವೆಂಕಟರಮಣಯ್ಯ, ಪರಂಬತ್ ಮಮ್ಮು ಮತ್ತು ಮಹಮ್ಮದ್ ಇಸಾಕ್ ಸಾಹೇಬ್ ಇವರುಗಳನ್ನು ಎರಡು ವರ್ಷಗಳ ವರೆಗೆ ಆಯ್ಕೆ ಮಾಡಲಾಗಿದೆ. ಶ್ರೀ ಎಂ. ಎ. ಪೂವಯ್ಯನವರನ್ನು ತಾ. ೨೭ರಲ್ಲಿ ನಡೆದ ವಿಂಟಿಂಗಿನಲ್ಲಿ ಸಭೆಯು ಅಧ್ಯಕ್ಷರಾಗಿ ಆರಿಸಿರುವರು.

ರಾಯಲ್ ವಿನೂನವಳದಲ್ಲಿ ತರಬೇತಾಗುತ್ತಿರುವವರಿಗೆ ವಿದ್ಯಾರ್ಥಿವೇತನ ಕೊಡುವ ಹೊಸ ಯೋಜನೆಯೊಂದು ಇಂಡಿಯಾ ಸರಕಾರದಿಂದ ಏರ್ಪಾಡಾಗಿದೆಯೆಂದೂ ಸಂಬಂಧಿಸಿದವರು ಆ ಬಗ್ಗೆ ಅರ್ಜಿ ಬರೆದುಕೊಳ್ಳಬಹುದೆಂದೂ ಪ್ರಕಟವಾಗಿದೆ.

ಕಳೆದ ಆಕ್ಟೋಬರಿನಲ್ಲಿ ಭಯಂಕರ ಬಿರುಗಾಳಿಯಿಂದ ನಿರಾಶ್ರಿತರಾದ ಆಂಧ್ರದ ಜನತೆಗೆ ಸಹಾಯ ನೂಡುವ ಉದ್ದಿಶ್ಯ ತಾ. ೧೩-೧೧-೫೦ರಲ್ಲಿ ಕೊಡಗು ಕೌನ್ಸಿಲ್ ಹಾಲ್‌ನಲ್ಲಿ ಒಂದು ಸಾರ್ವಜನಿಕ ಸಭೆಯನ್ನು ಚೀಫ್‌ಕವಿಷನರು ಏರ್ಪಡಿಸಿರುವರು.

ಕೇಂದ್ರ ಸರಕಾರದ ಸಂಸ್ಥಾನ ಶಾಖೆಯ ಸಲಹೆಗಾರರಾದ ಶ್ರೀ ವಿ. ಪಿ. ಮೆನನ್‌ರವರು ತಾರೀಕು ೧೧-೧೨-೫೦ರಲ್ಲಿ ಮಡಿಕೇರಿಗೆ ಬರುವರೆಂದು ತಿಳಿದು ಬಂದಿದೆ.

ಇದೇ ತಿಂಗಳು ೧೯ನೇ ತಾರೀಖು ಸೋಮವಾರದಿಂದ ಮಡಿಕೇರಿಯಲ್ಲಿರುವ ಶ್ರೀರಾಮಾಂಜನೆಯ ದೇವಾಲಯದಲ್ಲಿ ಹಿಂದೀ ತರಗತಿಗಳು ತೆರೆಯಲ್ಪಡುವುವು ಎಂಬುದಾಗಿ ತಿಳಿದು ಬಂದಿದೆ.

ಅಂಡಮಾನಿನಲ್ಲಿರುವ ಸುಮಾರು ೪೮ ಲುವತ್ತು ಕೊಡಗರು ಕಳೆದ ತಾರೀಖು ೧೦-೧೨-೪೯ರಲ್ಲು ವಿಂಡಳ್ ಅಂಡಮಾನಿನಲ್ಲಿ ಹುತ್ತಿ ಹಬ್ಬವನ್ನು ಬಹು ವಿಜೃಂಭಣೆಯಿಂದ ನಡೆಸಿದರು. ಅದೇ ದಿವಸ ರಾ ಸಾ. ಬಿದ್ದಂಡ ಚಂಗಪ್ಪನವರ ಅಧ್ಯಕ್ಷತೆಯಲ್ಲಿ ವಿಂಟಿಂಗೊಂದನ್ನು ನಡೆಸಿ "ಕೂರ್ಗ್ ಎಸೋಸಿಯೇಶನ್ ಆಫ್ ಅಂಡಮಾನ್" ಎಂಬೊಂದು ಸಂಸ್ಥೆಯನ್ನು ಸ್ಥಾಪನೆ ಮಾಡಿದರು. ಅಂಡಮಾನಿನ ಚೀಫ್‌ಕವಿಷನರಾದ ಶ್ರೀ. ಎ.ಜೆ.ಕೆ. ಫೋಸ್‌ರವರು ಆ ದಿನ ಅತಿಥಿಗಳಾಗಿದ್ದರು. ಆವರ ಅಧ್ಯಕ್ಷತೆಯಲ್ಲಿ ಹುತ್ತರಿಹಬ್ಬದ ನಿಮಿತ್ತ ನಡೆದ ಆಟೋಟಗಳ ಸ್ಪರ್ಧೆಯಲ್ಲಿ ಗೆದ್ದವರಿಗೆ ಮಿಸೆಸ್ ಬಿದ್ದಂಡ ಚಂಗಪ್ಪನವರು ಬಹುಮಾನಗಳನ್ನು ಹಂಚಿದರು.

ಫ್ರೇಜರ್‌ಪೇಟೆ ಶಾಲಾ ಕಟ್ಟಡದ ನಿಧಿಯ ಸಹಾಯಾರ್ಥವಾಗಿ ಜೈ ಹಿಂದ್ ಟಾಕೀಸ್‌ನವರು ತಾ. ೪-೧-೫೦ರಂದಲ್ಲಿ ಕೊಟ್ಟ ಪ್ರದರ್ಶನದಲ್ಲಿ ರೂ. ೫೦೦ ಜುಮೆಯಾಗಿ ಫಿಲಮ್ಮು ಖರ್ಚುಗಳ ರೂ. ೫೦ ನ್ನು ಕೊಟ್ಟು ಬಾಕಿ ರೂ. ೪೫೦ ನಿಧಿಗಾಗಿ ದೊರೆತಿದೆ.

ಐ. ಎಲ್. ಓ. ಪ್ರತಿನಿಧಿಗಳು.

ಅಂತರಾಷ್ಟ್ರೀಯ ಕೂಲಿಕಾರರ ಸಂಸ್ಥೆಯ ಡೈರೆಕ್ಟರ್ ಜನರಲರಾದ ಮಿ. ಡೇವಿಡ್ ಮೋರ್ಸ್‌ರವರೇ ಮೊದಲಾದ ಅಮೇರಿಕನ್, ಇಂಗ್ಲೆಂಡ್, ಫ್ರೆಂಚ್, ಬೆಲ್ಜಿಯಂ, ಡೆನ್ಮಾರ್ಕ್, ಚೈನ, ಮೊದಲಾದ ಜನಾಂಗಗಳ ಸ್ತ್ರೀ ಪುರುಷರು ಸೇರಿ ಸುಮಾರು ೪೦ ಜನ ಡೆಲಿಗೇಟುಗಳು ಮೈಸೂರಿನಲ್ಲಿ ನಡೆಯುವ ಪರಿಷತ್ತಿಗೆ ಬಂದಿದ್ದವರು ಈ ತಾರೀಕು ಒಂದರಲ್ಲಿ ಕೊಡಗನ್ನು ಸಂದರ್ಶಿಸಿದರು. ಇವರು ಸದರಿ ದಿನ ಬೆಳಿಗ್ಗೆ ಕೊಡಗಿನ ಸಹಕಾರಿ ಸಂಘಗಳ ರಿಜಿಸ್ಟ್ರಾರರಾದ ಶ್ರೀ ಪಿ. ಯುಂ. ಚಂಗಪ್ಪನವರ ಸಂಗಡ, ಈ ಮೊದಲೇ ಶ್ರೀ ಅಪ್ಪಾರಂಡ ಸಿ. ತಿಮ್ಮಯ್ಯನವರಿಂದ ಆಹ್ವಾನಿಸಲ್ಪಟ್ಟ ಮೇರೆ ಅವರ 'ಗ್ರೀನ್ಸ್ ಹಿಲ್ಸ್' ಮನೆಗೆ ಬಂದು ಅಲ್ಲಿ ಮಧ್ಯಾಹ್ನದ ಊಟವನ್ನು ಮುಗಿಸಿದರು. ಔತಣಕ್ಕೆ ಸುಮಾರು ನೂರು ಜನರು ಹಾಜರಿದ್ದರು. ಅನಂತರ ಸದರಿ ಪಾರ್ಟಿಯು ಮಡಿಕೇರಿಗೆ ಬಂದು ಸಾಯಂಕಾಲ ೪ ಗಂಟೆಗೆ ಕೋಟೆಯ ಎದುರುಗಡೆ 'ದೇವಡಿ ಪಟ್ಟೆ'ಯಲ್ಲಿ ಸಾರ್ವಜನಿಕರು ಏರ್ಪಡಿಸಿದ ಸತ್ಕಾರ ಕೂಟದಲ್ಲಿ ಭಾಗವಹಿಸಿದರು. ಚೀಫ್ ಕಮೊಷನರಾದ ದಿ. ಬಹದ್ದೂರ್ ಸಿ. ಟಿ. ಮೊದಲಿಯಾರವರು ಚಿಕ್ಕ ಭಾಷಣದಲ್ಲಿ ಅತಿಥಿಗಳಿಗೆ ಸ್ವಾಗತವನ್ನೀಡಿದರು. ಕೊಡಗಿನ ಸಾರ್ವಜನಿಕರ ಪರವಾಗಿ ದಿ. ಬಿ. ಸಿ. ಚಂಗಪ್ಪನವರು ಒಂದು "ಪೀಜಿ ಕತ್ತಿ"ಯನ್ನು ಕೊಡಗಿನ ಜ್ಞಾಪಕಾರ್ಥವಾಗಿ ಮಿ. ಮೋರ್ಸ್‌ರವರಿಗೆ ಬಹುಮಾನವಾಗಿ ಕೊಟ್ಟರು. ಮಿ. ಮೋರ್ಸ್‌ರವರು ಸ್ವಾಗತಕ್ಕೆ ಎಂದು ಸತ್ಕಾರ 'ಪೀಜಿ ಕತ್ತಿ'ಯನ್ನು ಕೊಡಗಿನ ಜ್ಞಾಪಕಾರ್ಥವಾಗಿ ಜಿನೀವಾದಲ್ಲಿರುವ ತಮ್ಮ ಹೆಡ್ ಆಫೀಸಿನಲ್ಲಿ ಇಡುವೆನೆಂದು ಹೇಳಿದರು. ನಂತರ ತೀರ್ಥಗಳಾದ ಮೇಲೆ ಪ್ರತಿಯೊಬ್ಬ ಅತಿಥಿಗೂ ಕೆಲವು ಕಿತ್ತಳೆಹಣ್ಣುಗಳನ್ನೂ ಒಂದೊಂದು ಕುಪ್ಪಿ ಜೇನನ್ನೂ ಒಂದೊಂದು ಯೂಲಕ್ಕಿ ಮೂಲೆಯನ್ನೂ ಕೊಡಲಾಯಿತು. ಅನಂತರ ಕೆಲವು ದಿವಸಗಳ ಹಿಂದೆ ತೆಗೆದ ತಿಂಡಿಯನ್ನು ಹಿಡಿದ ಬಿಳಿ ಅನೆಯನ್ನು ಅತಿಥಿಗಳಿಗೆ ತೋರಿಸಲಾಯಿತು. ಅಲ್ಲಿಂದ ಇನ್ನೊಂದು ದೊಡ್ಡ ಅನೆ ಮೇಲೆ ಅತಿಥಿಗಳು ಕೂತು ಅತ್ತಿತ್ತ ತಿರುಗಾಡಿದರು. ಸುಮಾರು ೬ ಗಂಟೆಗೆ ಅತಿಥಿಗಳೆಲ್ಲರೂ ಮೂರ್ನಾಡಿಗೆ ಹೋಗಿ ಅಲ್ಲಿ 'ಪಾಂಡಾಣೆ'ಯಲ್ಲಿ ಮೂರ್ನಾಡಿನ ಮುಖ್ಯಸ್ಥರು ಏರ್ಪಡಿಸಿದ್ದ ಬಲಮುರಿ ಗ್ರಾಮಸ್ಥರ ಬೊಳಕಾಟವನ್ನು ನೋಡಿದರು. ಚೀಫ್ ಕಮೊಷನರರು ಬೊಳಕಾಟದ ಅರ್ಥವನ್ನು ವಿವರಿಸಿ ಹೇಳಿ ಅದನ್ನು ನೋಡಿದಕ್ಕಾಗಿ ಅತಿಥಿಗಳಿಗೆ ವಂದಿಸಿದರು. ಮಿ. ಮೋರ್ಸ್‌ರವರು ಗ್ರಾಮಸ್ಥರನ್ನು ವಂದಿಸುತ್ತ ಇಂಥಾ ವಿಶೇಷತರದ ಕೂಟವನ್ನು ತಾವು ಸುತ್ತಿದ ಹಲವು ದೇಶದಲ್ಲೆಲ್ಲೂ ನೋಡಿರಲಿಲ್ಲವೆಂದೂ ಇದು ಇಲ್ಲಿಯ ಜನರ ಸ್ವಭಾವ ಮತ್ತು ಸಂಸ್ಕೃತಿಯನ್ನು ಸೂಚಿಸುತ್ತದೆಂದೂ, ಇದನ್ನು ತಾವೆಂದಿಗೂ ಮರೆಯಲಾರೆವೆಂದೂ ಪ್ರಸಂಶಿಸಿದರು. ನೆರೆದಿದ್ದ ದೊಡ್ಡ ಜನಸ್ತೋಮದ ಪರವಾಗಿ ಶ್ರೀ ಬಿದ್ದಂಡ ಜಿ. ಮುತ್ತಣ್ಣನವರು ಅಂತರಾಷ್ಟ್ರೀಯ ಜೀತಗೇಟರುಗಳು ತಮ್ಮ ಚಿಕ್ಕ ಗ್ರಾಮಕ್ಕೆ ದಯಮಾಡಿಸಿ ಗ್ರಾಮಸ್ಥರ ಕುಣಿತ ನೋಡಿ ಸಂತೋಷಪಡಿಸಿದಕ್ಕಾಗಿ ಅತಿಥಿಗಳನ್ನು ಕುರಿತು ವಂದಿಸಿದರು. ನಂತರ ಅತಿಥಿಗಳು ಗ್ರೀನ್ ಹಿಲ್ಸ್‌ಗೆ ಹಿಂತಿರುಗಿ ಅಲ್ಲಿ ರಾತ್ರಿಯ ಊಟವನ್ನು ತೀರಿಸಿಕೊಂಡು ಮೈಸೂರಿಗೆ ಹೊರಟರು.

ಓದುಗರ ಓಲೆಗಳು.

ಕಂದಾಯ

ರೀಸೆಟ್ಲ್‌ಮೆಂಟ್ ಕೊಡಗಿನಲ್ಲಿ ಶೀಘ್ರ ಪ್ರಾರಂಭವಾಗುವುದೆಂದೂ, ಅದಕ್ಕಾಗಿ ಒಬ್ಬ ಆಫೀಸರನ್ನು ತರಬೇತಿಗೆ ಕಳುಹಿಸಲಾಗಿದೆಯೆಂದೂ, ಅವರು ಬಂದೊಡನೆ ದನ್ನು ಕೈಕೊಳ್ಳಲಾಗುವುದೆಂದೂ, ಈ ಸೆಟ್ಲ್‌ಮೆಂಟ್ ಕೆಲಸವು ಪೂರ್ತಿಯಾಗ ಸುಮಾರು ಐದು ವರ್ಷಗಳು ಹಿಡಿಯು ದೆಂದೂ, ವರ್ತಮಾನಗಳಿವೆ. ಈ ಸ್ಥಿ ಭೂ ಕಂದಾಯಗಳನ್ನು ಏರಿಸುವ ಯೋಚನೆಗಳಿವೆ. ಈ ದೃಷ್ಟಿಯಿಂದಲೇ ಕೊಡಗು ಶಾಸನ ಸಭೆಯು ವಿಶೇಷ ವಿಭಾಗಿಗೊಂದನ್ನು ತಾ. ೧೨-೧-೩೦ ಕ್ಕೆ ಕರೆ ಯುವರೆಂದೂ ವಾರ್ತೆ ಇದೆ. ಈ ವಿಭಾಗಿನಲ್ಲಿ ಭೂಕಂದಾಯವನ್ನು ಈಗಿರು ತರ ಎಕರೆ ಪಟ್ಟೆ, ಕಾಫಿ, ಕಿತ್ತಳೆ ಮೊದಲಾದುವುಗಳ ಕಂದಾಯವನ್ನು ತರು ಪಟ್ಟು ಏರಿಸುವ ಸೂಚನೆಯನ್ನು ಪ್ರತಿನಿಧಿಗಳ ಮುಂದೆ ಇಡಲಾಗುವುದೆಂಬ ರ್ತಿ ಇದೆ.

ದಕ್ಷ ಆಡಳಿತ ನಡೆಯಬೇಕಾದರೆ ಹೆ ಸಿನ ಕಂದಾಯ ಕೊಡಬೇಕೆಂಬ ತತ್ವವ ನ್ನು ಎಲ್ಲರೂ ಒಪ್ಪುವುದಾದರೂ ಕಂದಾ ಯವನ್ನು ಸಾರ್ವತ್ರಿಕವಾಗಿ ಏರಿಸುವುದು ಅಪಾಯಕರ. ಕಾಫಿ ಕಿತ್ತಳೆಗಳಂಥ ಲಾ ಭದಾಯಕ ವ್ಯವಸಾಯಗಳ ಕಂದಾಯವ ನ್ನು ಏರಿಸಿದರೆ ಹಾನಿಯೂಗದು. ಕಾಫಿ ಯಲ್ಲಿ ಎಕರೆಗೆ ರೂ. ೨೦೦ ಕ್ಕಿಂತ ಹೆಚ್ಚು ಕಿತ್ತಳೆಯಲ್ಲಿ ಅದಕ್ಕೂ ಮಿಗಿಲಾಗಿ ಉತ್ಪತ್ತಿ ದೊರೆಯುತ್ತಿರುವಾಗ ಈಗಿರುವ ಏಕ್ರ ರೂ. ಎರಡರ ಕಂದಾಯವು ಮೂರು ನಾಲ್ಕು ಹೆಚ್ಚಿದರೆ ಆವರಿಗೆ ಬಹುಶಃ ತಲೆ ಹೊರೆಯೂಗಲಾರದು. ಅಲ್ಲದೆ ಭೂವ್ಯವ ಸಾಯದ ಮಟ್ಟಿಗೂ ಕಂದಾಯವಿಲ್ಲದ ತುಂಬಳಿ, ಜಹಗೀರು, ಕಡಿಮೆ ಕಂದಾಯ ಮತ್ತು ಜಪ್ತಿ ಮೊದಲಾದುವುಗಳ ಕಂದಾಯ ವನ್ನು ಸಾಗು ಭೂಮಿಯ ಕಂದಾಯದ ಮಟ್ಟಕ್ಕೆ ಏರಿಸಲಿ. ಏಕೆಂದರೆ ಒಂದೇ ರೀತಿಯ ವ್ಯವಸಾಯ ಮಾಡಿ ಬೆಳೆ ಬೆಳೆಸುವ ಭೈತರ ಭೂಮಿಯ ಮೇಲೆ ಸರಕಾರವು ತಾರತಮ್ಯದ ಕಂದಾಯ ನಿಶ್ಚಯಿಸುವುದು ಎಂದೂ ನ್ಯಾಯವಲ್ಲ. ಎಲ್ಲಾ ಭೂಮಿಯ ಕಂದಾಯ ದರವು ಸಾಗು ದರಕ್ಕೆ ಬಂದರೆ ಸಕ. ಈಗಿರುವ ಸಾಗು ಕಂದಾಯ ದರವನ್ನು ಮಾತ್ರ ಹೆಚ್ಚಿಸುವ ಗೋಜಿಗೆ ಯಾರೂ ಹೋಗಬಾರದಾಗಿ ಈ ಮೂಲಕ ಎಚ್ಚರಿಸುವುದಾಗಿದೆ.

ಈಗ ಸಾಗು ಭೂಮಿಗೆ ಇರುವ ಕಂದಾಯವನ್ನೇ ಪಾವತಿ ಮಾಡಲಾರದೆ ಅನೇಕ ಭೂಮಿ ಪರಾಜುಗಳಾಗುತ್ತಿವೆ. ಇದನ್ನು ದ್ವಿಗುಣ ಹೆಚ್ಚಿಸಿದರೆ ಬಡ ರೈತನ ಸ್ಥಿತಿಯು ಶೋಚನೀಯವಾಗುವುದರಲ್ಲಿ ಸಂಶಯವಿಲ್ಲ. ರೈತನ ಜೀವನವು ಇತ್ತೀಚೆಗೆ ಇನ್ನೂ ವಿಷಮಾವಸ್ಥೆಗಿಳಿದಿದೆ. ಆತನ ಜೀವನ ನಿರ್ವಾಹವೇ ಕಷ್ಟವಾಗುತ್ತಿದೆ. ಜೊತೆಗೆ ಈ ವರ್ಷ ಆತನ ಭತ್ತಕ್ಕೆ ಗಾಡಿಗೆ ಐದಾರು ರೂಪಾಯಿ ಬೆಲೆ ಕಡಿಮೆಯೂ ಆಗಿದೆ. ಈ ವಿವಿಧ ತೊಂದರೆಯಿಂದ ಬಳಲುವ ರೈತನಿಗೆ ಪುನಹ ಕಂದಾಯ ಹೆಚ್ಚಿಸಬಾರದು. ಸರಕಾರಕ್ಕೆ ಉತ್ಪತ್ತಿ ಬರಬಹುದಾದ ಇತರ ಮಾರ್ಗಗಳನ್ನು ಹುಡುಕಬೇಕೇ ವಿನಹ ಬಗ್ಗಿದ ರೈತನ ಬೆನ್ನೇರಲೆತ್ನಿಸಬಾರದು. ತಾ. ೧೨ ರಲ್ಲಿ ನಡೆಯುವ ಕೌನ್ಸಿಲ್ ಸಭೆಯಲ್ಲಿ ಜನಪ್ರತಿನಿಧಿಗಳು ಇದನ್ನು ಗಮನದಲ್ಲಿಟ್ಟು ವರ್ತಿಸುವರಾಗಿ ನಂಬಲಾಗಿದೆ.

ಬಿ. ಕುಶಾಲಪ್ಪ.

ಪಳೆ ರೋಗ

ಕೇಂದ್ರ ಸರಕಾರದ ಆಡ್ಯ ಮಹನೀಯರು, ಹೊರಗಿನ ಇತರ ಮುಂದಾಳುಗಳು ಯೂ ಉದ್ಯೋಗಸ್ಥರು ಕೊಡಗಿಗೆ ಬರುವಾಗ ಅವರಿಗೆ ಸ್ವಾಗತ ಸತ್ಕಾರ ಕೂಟಗಳನ್ನು ಏರ್ಪಡಿಸಲಾಗುತ್ತದೆ. ಇಂಥಾ ಸತ್ಕಾರ ಕೂಟಗಳು ಈ ವರೆಗೆ ಮಡಿಕೇರಿಯಲ್ಲಿ ಹಲವು ನಡೆದಿವೆ. ಮಡಿಕೇರಿಯ ಕೆಲವೊಂದು "ಗಣ್ಯರು" ಸೇರಿ ಕೊಡಗಿನ ಜನರ ಪರ ಬಿನ್ನವತ್ತಳೆ ಅರ್ಪಿಸಿದ ನಿದರ್ಶನಗಳೂ ಇವೆ. ಕೊಡಗಿನ ಜನರ ಮೂತಿರಲಿ, ಮಡಿಕೇರಿಯ ಜನರ ಕೂಡ ಸಹಾನುಭೂತಿ ಇಲ್ಲದ ಇವರ ವರ್ತನೆ ಖಂಡನಾರ್ಹವಾಗಿದೆ.

ಹೊರಗಿನ ಯಾರೇ ಮುಂದಾಳು ಬಂದಾಗ ಅವರಿಗೆ ಔತಣಕ್ಕೆ, ಜಪ ಪಾನಕ್ಕಾಗಿ ಚಂದಾ ಎತ್ತುವದಿದೆ. ಅಂಥಾ ಚಂದಾದರವನ್ನೇ ಬಡವನ ಜೇಬಿಗೆ ನಿಲುಕದಂತೆ ನಿಶ್ಚಯಿಸಿ ಕೆಲವು ಸಿರಿವಂತರು ಮಾತ್ರ ಸೇರಿ ಇಂಥಾ ಔತಣ, ಚಹಪಾನಗಳನ್ನು ನಡೆಸುವ ಆ ಹಳೆ ರೋಗ ಇಂದೂ ಇರುವುದು ವಿಷಾದಕರ. ಹೊರಗಿನ ಇಂಥಾ ಮುಂದಾಳುಗಳಾಗಲೀ, ಸರಕಾರಿ ಉದ್ಯೋಗಿಗಳಾಗಲೀ ಬಂದಾಗ ಸಾರ್ವಜನಿಕವಾಗಿ ಸಭೆ ನೆರೆಸಿ ಅವರಿಗೆ ಕೊಡಗಿನ ಜನಸಾಮಾನ್ಯರ ಪರಿಚಯ ಮಾಡುವ ಬದಲು ಮಡಿಕೇರಿಯ ಕೆಲವು ಮಹನೀಯರು ಮಾತ್ರ ಕೊಡಗಿನವರೆಂದು ವರ್ತಿಸುವುದು ಯೋಗ್ಯವಲ್ಲ. ಐ. ಎಲ್ ಓ. ಸಂಘದ ಅಧ್ಯಕ್ಷರು ಮತ್ತಿತರರು ಬಂದಾಗ ಕನಿಷ್ಠ ಚಂದಾ ರೂ. ೫ ಎಂದು ನಿಶ್ಚಯಿಸಿ ಮಡಿಕೇರಿ ಕೋಟೆಯ ಎದುರು ಕೇವಲ ನಲವತ್ತು ಜನರು ಆನರನ್ನು ಚಹಾ ಕೂಟ ಏರ್ಪಡಿಸಿ ಸ್ವಾಗತಿಸಿದರಂತೆ. ಜಗತ್ತಿನ ವಿವಿಧ ರಾಷ್ಟ್ರಗಳಿಂದ ಬಂದ ಇವರು ಕೇವಲ ಮಡಿಕೇರಿಯಲಿಂ ಜನರನ್ನು ನೋಡಲು ಬಂದಿರುವುದೆಂದು ತಿಳಿದರೇ? ಇನ್ನಾದರೂ ಇಂಥಾ ದಾರಿ ತಪ್ಪಿದ ನೀತಿಯನ್ನು ಬಿಡಬೇಕು. ಹಾಗೆ ಊಟ, ಚಹಪಾನ ಪಾರ್ಟಿ ಮಾಡಲು ಇಷ್ಟವಿದ್ದರೆ ಸಾರ್ವಜನಿಕ ಕೂಟ ನಡೆಸಿದ ನಂತರ ಮಾಡಿಕೊಳ್ಳಲಿ. ದುಡ್ಡಿರುವವರು ಅವರಲ್ಲಿ ಸೇರಲಿ. ಆದರೆ ದುಡ್ಡಿನ ಬೇಲಿ ಹಾಕಿ ಬಡಜನರಿಗೆ ಅವರನ್ನು ನೋಡುವ ಯೂ ಕೇಳುವ ಸೌಭಾಗ್ಯವನ್ನು ಇಲ್ಲದಂತೆ ಮಾಡುವದು ದೇಶದ್ರೋಹವೆನ್ನಬೇಕಾಗುತ್ತದೆ, ಇನ್ನಾದರೂ ಈ ಮಹನೀಯರು ಎಚ್ಚೆತ್ತು ವರ್ತಿಸುವರೇ?

ಶಂಕರ. ಕೆ.

ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್

ತಾರೀಖು ೨೮-೧೨-೪೯ ರಲ್ಲಿ ಇಂಡಿಯಾ ಸರಕಾರದ ರಿಸೆಟ್ಲ್‌ಮೆಂಟ್ ಮತ್ತು ಎಂಪ್ಲಾಯಿಮೆಂಟ್ ಡೈರೆಕ್ಟರ್ ಜನರಲರಾದ ಡಾ. ಎನ್. ದಾಸ್‌ರವರು ಮಡಿಕೇರಿಗೆ ಬಂದಿದ್ದರು. ಸಾರ್ವಜನಿಕ ಸಭೆಯೊಂದು ನಡೆಯಿತು. ಚೀಫ್ ಕಮಿಷನರೂ ಅನೇಕ ಪ್ಲಾಂಟರುಗಳೂ, ಇತರ ಉದ್ಯೋಗಸ್ಥರೂ ಹಾಜರಿದ್ದರಲ್ಲದೆ ಮದರಾಸ್ ರೀಜನಲ್ ರಿಸೆಟ್ಲ್‌ಮೆಂಟ್ ಮತ್ತು ಎಂಪ್ಲಾಯಿಮೆಂಟ್ ಡೈರೆಕ್ಟರಾದ ಶ್ರೀ ಅಬ್ದುಲ್ ಕ್ವಾದಿರ್‌ರವರೂ, ಮತ್ತಿತರರೂ ಹಾಜರಿದ್ದರು.

ಡಾಕ್ಟರ್ ದಾಸ್ ಮತ್ತು ಕ್ವಾದಿರ್ ಇವರನ್ನು ಸ್ವಾಗತಿಸುತ್ತಾ ಚೀಫ್ ಕಮಿಷನರು ಹೀಗೆ ಹೇಳಿದರು. "ಕೊಡಗಿನಲ್ಲಿ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜಿನ ಶಾಖೆಯು ಸ್ಥಾಪಿತವಾಗಿ ಬರೆ ಆರು ತಿಂಗಳುಗಳಾದರೂ ಈ ಅಲ್ಪ ಅವಧಿಯಲ್ಲಿ ಅದು ಅಪಾರವಾದ ಸೇವೆ ಮಾಡಿದೆ. ಯಾವುದೇ ಆಡಳಿತಕ್ಕೂ ಬೇಕಾದ ಅವಶ್ಯಕ ಶಾಖೆ ಇದು. ಹಿಂದೂದೇಶದ ಈ ಇಲಾಖೆ ಪ್ರಾರಂಭವಾಗಿ ಈ ವರೆಗೆ ನಾಲ್ಕು ಲಕ್ಷ ಜನರಿಗೆ ಉದ್ಯೋಗ ಪದಗಿಸಿದೆ. ಕೊಡಗು ವ್ಯವಸಾಯಗಾರರ ನಾಡು. ವ್ಯವಸಾಯಕ್ಕೆ ಬೇಕಾದ ಆಳುಗಳನ್ನು ಒದಗಿಸುವ ಕೆಲಸವು ಈ ಶಾಖೆಯು ಪರಿಧಿಯೊಳಗಿದೆ. ಕೊಡಗಿನಲ್ಲಿ ೬೦,೦೦೦ ತೋಟ ಕೆಲಸಗಾರರಿದ್ದಾರೆ. ಆಳುಗಳ ಕೊರತೆಯು ಕೂಗು ಹಲವೆಡೆಗಳಿಂದ ಕೇಳುತ್ತಿದೆ. ಕೊಡಗಿನ ಪ್ಲಾಂಟರುಗಳ ಮತ್ತಿತರರ ಬೇಡಿಕೆಯನ್ನು ಸಲ್ಲಿಸುವ ಜವಾಬ್ದಾರಿಯನ್ನು ಇವರು ವಹಿಸಿ ಸಹಾಯ ಮಾಡುವರಾಗಿ ನಂಬುತ್ತೇನೆ".

ಡಾ. ದಾಸ್‌ರವರು ಚೀಫ್ ಕಮಿಷನರನ್ನು ವಂದಿಸಿ ಹೀಗೆ ಹೇಳಿದರು. "ಈ ಸಂಸ್ಥೆಯು ಇನ್ನೂ ಶಿಶುವು. ಹಿಂದೂ ದೇಶದಲ್ಲಿ ಇದು ಹೊಸ ಯತ್ನವೇ ಅಲ್ಲ, ಇಡೀ ಏಷ್ಯಾದಲ್ಲಿ ವ್ಯವಸ್ಥಿತ ಏರ್ಪಾಡು ಹಿಂದೂದೇಶದಲ್ಲೇ ಆಗುತ್ತಿರುವುದಾಗಿದೆ. ಸಂಶಯ, ತೊಂದರೆ ಎಡರುಗಳು ಅನೇಕವಿವೆ. ಕೆಲಸ ಬೇಡುವವರಿಗೆ ಕೆಲಸ ಒದಗಿಸುವ ಕೆಲಸಗಾರರನ್ನು ಬೇಕೆಂಬುವವರಿಗೆ ಯೋಗ್ಯರನ್ನು ಒದಗಿಸುವ ಜವಾಬ್ದಾರಿ ಸುಲಭವಲ್ಲ. ಆದರೂ ಈ ಉದ್ಯಮಬಲ್ಲಿ ತಕ್ಕವ ಟ್ಟಿಗಿನ ಜಯ ಪಡೆಯಲಾಗಿದೆ. ಈ ಸಂಸ್ಥೆಯು ಮಧ್ಯಸ್ಥಗಾರರನ್ನು ಇಲ್ಲದೆ ಮಾಡಿ ಕೆಲಸಗಾರ ಮತ್ತು ಯಜಮಾನರಲ್ಲಿ ಹತ್ತಿರದ ಸಂಬಂಧವನ್ನು ಹೆಚ್ಚಿಸಿದೆ. ಕೊಡಗಿನ ಮಟ್ಟಿಗೆ ವ್ಯವಸಾಯ ಮತ್ತು ತೋಟಗಾರರಿಗೆ ಆಳುಗಳನ್ನು ಒದಗಿಸುವುದೇ ಪ್ರಶ್ನೆಯಾಗಿದೆ. ಕೊಡಗಿನ ಹೊರಗಿನಿಂದ ಆಳುಗಳನ್ನು ತಂದರೂ ಕೂಲಿ ವಿಪರೀತವಾಗಿರುವುದಲ್ಲದೆ ಆಳುಗಳನ್ನು ಪಡೆಯುವದು ಕಷ್ಟವೂ ಅತೃಪ್ತಿಕರವೂ ಆಗಿದೆ. ಪ್ಲಾಂಟರುಗಳು ಮೇಸ್ತ್ರಿಗಳನ್ನು ನಂಬಬೇಕಾಗಿದೆ. ಇವರು ಅತ್ತ ಪ್ಲಾಂಟರುಗಳಿಂದ ಇತ್ತ ಕೆಲಸಗಾರರಿಂದ ಹೀಗೆ ಎರಡು ಕಡೆಯಿಂದಲೂ ಲಾಭ ಪಡೆಯುತ್ತಾರೆ. ನಮ್ಮ ಈ ಸಂಸ್ಥೆಯ ಶಾಖೆಗಳು ಇಲ್ಲಿ ಮತ್ತು ಸುತ್ತಮುತ್ತಲಿನ ಪ್ರಾಂತಗಳಲ್ಲಿರುವುದರಿಂದ ಯೋಗ್ಯ ಆಳುಗಳನ್ನು ಒದಗಿಸುವ ಕೆಲಸ ಸಾಧ್ಯವಾಗಬಹುದು. ಈ ಕೆಲಸ ಆಗಲು ಸ್ವಲ್ಪ ಸಮಯ ಬೇಕು. ಇದಕ್ಕೆ ಎಲ್ಲರ ಸಹಕಾರ ಬೇಕು.'

ನಂತರ ಐವರ್ ಬುಲ್‌ರವರು ಈ ಸಂಸ್ಥೆಯ ಕೆಲಸವನ್ನು ಹೊಗಳಿ ಸಾವಧಾನದಿಂದ ಪ್ಲಾಂಟರುಗಳು ವರ್ತಿಸಬೇಕೆಂದೂ, ಸಂಸ್ಥೆಗೆ ಸಹಕಾರವನ್ನೀಯಬೇಕೆಂದೂ ಹೇಳಿದರು.

ಸಹಕಾರ ಸಂಘಗಳ ರಿಜಿಸ್ಟ್ರಾರವರಾದ ಶ್ರೀ ಪಿ. ಎಂ. ಜಂಗಪ್ಪನವರು ವಂದನಾರ್ಪಣೆ ಮಾಡಿದ ನಂತರ ಚೀಫ್ ಕಮಿಷನರು ವಿಧಿಸಿದ ಚಹಪಾನದಿಂದ ಸಭೆ ಮುಕ್ತಾಯಗೊಂಡಿತು.

ಕೊಡಗು ಉಪಾಧ್ಯಾಯರ ಸಮ್ಮೇಳನ.

ಅಖಿಲ ಕೊಡಗು ಉಪಾಧ್ಯಾಯರ ಹತ್ತೊಂಭತ್ತನೆಯ ವಾರ್ಷಿಕ ಮಹಾಸಭೆಯು ಇದೇ ಡಿಸೆಂಬರ್ ಮೂಜೆ ೨೫ ನೇ ಭಾನುವಾರ ದಿವಸ ಅಪರಾಹ್ನ ೨ ಗಂಟೆಗೆ ನಾಪೋಕ್ಲು ಗವರ್ನಮೆಂಟ್ ಹೈಸ್ಕೂಲಿನಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು. ಶ್ರೀ ಕೆ. ಆರ್. ಕೆ. ಆನಂತನ್ ಎಂ. ಎ. (ಸ್ಟೇಸ್ಮೋ) ಎಂ. ಇಡಿ. (ಲೀಡ್ಸ್)ಮೈಸೂರು ಯೂನಿವರ್ಸಿಟಿ ಟೀಚರ್ಸ್ ಕಾಲೇಜ್ ಅವರು ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು. ಸ್ವಾಗತ ಮಂಡಳಿಯ ಅಧ್ಯಕ್ಷರಾದ ಶ್ರೀ ಸಿ. ಎಸ್. ರಾಮನ್ ಎಂ. ಎ. ಎಲ್. ಟಿ. ಯವರು ಸಮ್ಮೇಳನಕ್ಕೆ ಬಂದ ಅತಿಥಿಗಳೆಲ್ಲರಿಗೂ ಸ್ವಾಗತವನ್ನಿತ್ತರು. ಶ್ರೀ ಅನಂತನ್ ಅವರು ಈ ಕಾಲದಲ್ಲಿ ಉಪಾಧ್ಯಾಯರು ವಿದ್ಯಾಭ್ಯಾಸದ ವಿಷಯದಲ್ಲಿ ಗಮನಿಸಬೇಕಾದ ಪ್ರಶ್ನೆಗಳನ್ನು ಕುರಿತು ಒಂದು ಸ್ವಾರಸ್ಯವಾಗಿ ಇಂಗ್ಲಿಷಿನಲ್ಲಿ ಮಾತನಾಡಿದರು. ಶ್ರೀ ಬಿ. ಯು ಸ್. ಕುಶಾಲಪ್ಪ ಬಿ. ಎ. ಡಿ. ಇ. (ಲಂಡನ್) ಜಿಲ್ಲಾ ವಿದ್ಯಾಧಿಕಾರಿಯವರು ಮೈಸೂರಿನಲ್ಲಿ ನಡೆದ ಯಂಸ್ಟೆಪ್ಸ್ ಸೆಮಿನಾರ್‌ನಲ್ಲಿ ನಡೆದ ವಿಶೇಷಾರ್ಥಿಯ ವಿಚಾರವಾಗಿ ಬಹು ಸ್ವಾರಸ್ಯವಾಗಿ ಇಂಗ್ಲಿಷಿನಲ್ಲಿ ಭಾಷಣ ಮಾಡಿದರು. ಕೊಡಗು ಗವರ್ನಮೆಂಟ್ ಕಾಲೇಜಿನ ಕನ್ನಡ ಪಂಡಿತರಾದ ಶ್ರೀ ರಾಮಕೃಷ್ಣ ಉಡುಪರು ಭಾಷಾ ಸಮಸ್ಯೆಯನ್ನು ಕುರಿತು ಕನ್ನಡದಲ್ಲಿ ಮಾತನಾಡಿದರು. ತೊನೆಯುದಾಗಿ ಮಾನ್ಯ ಅಧ್ಯಕ್ಷರ ಮುಕ್ತಾಯ ಭಾಷಣವು ಮುಗಿದನಂತರ ಶ್ರೀ ಬಿ.ಎಸ್ ವಿ. ಕೆ. ವಿಠಲ್, ಬಿ. ಎ. ಎಂ. ಎಸ್. ಸಿ. ಎ. ಐ. ಐ. ಎಸ್. ಸಿ. ಅಖಿಲ ಕೊಡಗು ಉಪಾಧ್ಯಾಯರ ಸಮ್ಮೇಳನದ ಅಧ್ಯಕ್ಷರು ವಂದನಾರ್ಪಣೆಯನ್ನು ಮಾಡಿದರು. ಶ್ರೀಯುತರುಗಳಾದ ಸಿ. ಎಸ್. ರಾಮನ್ ಅವರೂ, ಕೆ. ಎಸ್. ನಂಜುಂಡನವರೂ ಸಮ್ಮೇಳನಕ್ಕೆ ಬಂದಿದ್ದ ಅತಿಥಿಗಳೆಲ್ಲರಿಗೂ ಊಟೋಪಚಾರಗಳನ್ನು ಏರ್ಪಡಿಸಿದ್ದರು.

ಕಳೆದ ೧೯೪೯, ಬಂದ ೧೯೫೦

ಭಾರತ ಚರಿತ್ರೆಯ ಒಂದು ಅನರ್ಘ್ಯ ಪುಟವಾಗಿ ರಾಜಿಸಬಲ್ಲ ೧೯೪೯ನೇ ಇಸವಿ ಕಳೆಯಿತು. ವಿಶೇಷ ಮಹತ್ವದ ಒಂದು ವರುಷವೀಗ ಪೂರ್ಣಗೊಂಡಿತು.

ಅಪಾರ ಕಾದ ಶರಧಿಯಲ್ಲಿ ೧೯೪೯ನೇ ಇಸವಿಯೆಂಬುದು ಒಂದು ದೊಡ್ಡ ತೆರೆಯಾಗಿ ಎದ್ದುದೀಗ ಬೀಳುತಿತ್ತು. ೧೯೪೭ ಮತ್ತು ೧೯೪೮ನೇ ಇಸವಿಗಳು ನಿಜಕ್ಕೂ ಅತಿ ಪ್ರಚಂಡ ತೆರೆಗಳಾಗಿದ್ದವು ಪ್ರತಾಪೀ ಹಾಗೂ ಪ್ರಳಯ ತೆರೆಗಳೇ ಆಗಿದ್ದವು. ತಳ ಹಿಡಿದಿದ್ದ ಭಾರತೇಯರನ್ನು ಎತ್ತರಕ್ಕೇರಿಸಿಕೊಂಡಂತೆಯೇ ಅಪ್ಪಳಿಸುವ ಸಾಹಸವೂ ಅವುಗಳದಾಗಿತ್ತು. ಅವುಗಳನ್ನನುಸರಿಸಿ ಬಂದ ೧೯೪೯ನೆಲ್ಲಿ ಭೀಕರತೆಗಿಂತ ಹೆಚ್ಚು ಗಂಭೀರತೆಯೇ ಇತ್ತೆನ್ನಬಹುದು. ಪರಿಸ್ಥಿತಿ ಶಾಂತವಾಗುತ್ತಿದೆ, ಎಂಬ ಅಭಯದಾನವು ೧೯೪೯ರದಿದೆ. ಅಲ್ಲೋಲಕಲ್ಲೋಲತೆಯಿಂದ ಭವ್ಯ ಶಾಂತತೆಯು ಕಡೆಗೆ ದಾಟಿಸುವ ಸೇತುವೆಯಂತೆ ನಾವು ೧೯೪೯ನ್ನು ದಾಟುತ್ತಿದ್ದೇವೆ.

ತನ್ನ ಪೂರ್ವಿಕಾದಿಗಳಂತೆ ಅಕಸ್ಮಿಕ ಆದ್ಭುತ ಅನೂನ ಘಟನೆಗಳನ್ನು ೧೯೪೯ ಮಾಡಿಲ್ಲ ಅವರೆ ಸುದೃಢ ವ್ಯವಸ್ಥಾಪಕತ್ವವನ್ನು ಸಾಧಿಸಿದೆ ವಿಂಚುವೇಗದ ನೆನೆತ ಮತ್ತು ಪತನವೆರಡೂ ಇವರಿಬ್ಬರೂ ದೃಢವಾಗಿ ಹೆಜ್ಜೆಯಿಡುತ್ತಾ ಹಾದಿ ಸಾಗಿಸಿ ಪ್ರಗತಿಯಿದೆ. ಹೋರಾಡಿ ಗಳಿಸಿಕೊಂಡ ಅಪೂರ್ವಾಕಸ್ಮಿಕ ವಿಜಯಗಳಾವುವೂ ಈ ವರ್ಷದ ಪಂಪಾವನೆಯಲ್ಲಿರದಿದ್ದರೂ ಕ್ರಮಬದ್ಧವಾಗಿ ದುಡಿದು ಸಂಪಾದಿಸಿನ್ನು ಬಹಳವಾಗಿದೆ.

೧೯೪೯ನೇ ಆಗಸ್ಟ್ ೧೫ರಂತಹ "ಉದಯೋತ್ಸವ" ಈ ವರ್ಷದಲ್ಲಿರಲಿಲ್ಲ. ಆದರೆ ಹಾಗೆ ಉದಯಿಸಿದ ಸ್ವರಾಜ್ಯವನ್ನು ಶಾಶ್ವತವಾಗಿ ಉಳಿಸಿಕೊಳ್ಳಲು ಆಗಬೇಕಾದುದರಲ್ಲಿ ಬಹಳ ಅಂಶ ಈ ವರ್ಷದಲ್ಲುಂಟಾಗಿದೆ. ೧೯೪೯ನೇ ಜನವರಿ ೩೦ರಂತಹ "ಬಲಿದಾನ"ವೂ ಈ ಇಸವಿಯಲ್ಲಿ ಆಗುದಿಲ್ಲ. ಆದರೆ ಅದರಿಂದ ಕಲಿಯಬೇಕಾದ ಪಾಠವನ್ನು ಸರಿಯಾಗಿ ಮನನ ಮಾಡಿಕೊಳ್ಳುವ ಮೂಲಕವೂ, ಆ ಕೆಲಸವು ಪಾಪಾಂತಗಳನ್ನು ಧೂಪಾಡಿಸಿಕೊಳ್ಳುವ ಮೂಲಕವೂ ಪ್ರಾಯಶ್ಚಿತ್ತವಿಧಿ ಈ ವರ್ಷದಲ್ಲೇ ಪೂರ್ಣಗೊಂಡಿದೆ. ೧೯೪೯ರಲ್ಲಾದ 'ಹೈದರಾಬಾದ್ ಶುದ್ಧೀಕರಣ' ದಂತಹ ಪ್ರದರ್ಶನವೊಂದು ಈ ವರ್ಷ ಎಲ್ಲಿಯೂ ನಡೆದಿಲ್ಲವಾದರೂ, ಹಾಗೆ ಗಳಿಸಿಕೊಂಡುದಿಲ್ಲವನ್ನೂ ಉಳಿಸಿಕೊಳ್ಳುವ ಮತ್ತು ಬೆಳಸಿಕೊಳ್ಳುವ ವ್ಯವಸ್ಥೆ ಬಂದುದು ಈ ವರ್ಷವೇ.

ಒಟ್ಟನ ಮೇಲೆ ೧೯೪೯ನೇ ಇಸವಿಯು ನವರಚನೆಗಳ ಆವಧಿ; ವಿಧಾಯಕ ಕಾರ್ಯಗಳ ವರ್ಷ. ಪುರ್ನಿರ್ಮಾಣ ಕಾಲ, ಆ ನೆಲೆಯಲ್ಲಿ ಆಂದೋಲನಗಳೆಲ್ಲವೂ ಶಾಂತವಾಗಿ, ಸಮಮಟ್ಟಕ್ಕೆ ಬಂದು ೧೯೪೯ರಲ್ಲಿ ಭವಿಷ್ಯಕ್ಕೆಂದು ಭದ್ರ ಅಸ್ತಿವಾರ ಬಿದ್ದಿದೆ. ಸ್ವತಂತ್ರ್ಯಭಾರತದ ಶಾಂತಚಿತ್ತ ಮತ್ತು ಸಂಘಟನಾ ಶಕ್ತಿಗೆ ದೊರೆತ ಪ್ರಥಮೋಪಕಾಶವೇ ೧೯೪೯.

ಸ್ವತಂತ್ರ ಭಾರತದ ಗೃಹಕಂಟಕಗಳ ಪೈಕಿ ಅತಿ ದೊಡ್ಡದಾಗಿದ್ದ ಆಶ್ರಿತ ರಾಜ್ಯಗಳ ಸಮಸ್ಯೆಯನ್ನು ಸಂಪೂರ್ಣವಾಗಿ ನಿವಾರಿಸಿಕೊಂಡು ಅಖಂಡ ಭಾರತದ ಆಕಾರ ಸಂದುಗಳನ್ನು ಸಂಪೂರ್ಣವಾಗಿ ಕೂಡಿಸಿಟ್ಟುದು ಈ ವರುಷಲ್ಲೆ. ಆಶ್ರಿತ ರಾಜ್ಯಗಳನ್ನು ಕೇಂದ್ರದೊಂದಿಗೆ ವಿಲೀನಗೊಳಿಸುವ ಮತ್ತಾ ಅಲ್ಲಲ್ಲಿ ಸಂಸ್ಥಾನೀ ಒಕ್ಕೂಟಗಳನ್ನು ರಚಿಸುವ ಕೆಲಸವು ಈ ಇಸವಿಯಲ್ಲಿ ಪೂರ್ಣಗೊಂಡಿದೆ. ಮಾತ್ರವಲ್ಲ, ನವರಾಜ್ಯ ಶಾಸನವನ್ನು ಅಪೆಲ್ಲನ ನನ್ನ ಪ್ರಾಂತ್ಯಗಳ ಮಟ್ಟಕ್ಕೇನೇ ತರಲಾಗಿದೆ

ಆರ್. ಎಸ್. ಎಸ್. ಕಮ್ಯೂನಿಸ್ಟರಂತಹ ಪ್ರತಿಗಾಮೀ, ಅತಿಗಾಮೀ, ಪಕ್ಷಗಳಿಬ್ಬರು ಜಾತ್ಯಾತೀತ ಹಾಗೂ, ಶುದ್ಧ ಪ್ರಜಾಪ್ರಭುತ್ವವಾದೀ ರಾಷ್ಟ್ರವು ಯಾವ ಭೋಳಕಣೆ ವಹಿಸಬೇಕೋ, ಆ ಧೋರಣೆಯನ್ನು ಸರಕಾರವು ಈ ವರ್ಷ ಜಯಶೀಲನವಾಗಿ ಜಾರಿಯಲ್ಲಿಟ್ಟಿದೆ.

ಪ್ರಚಲಿತ ಸ್ಥಿತಿಗತಿಗಳಲ್ಲಿ ಸಹಜವಾದ ಅಸಂತೃಪ್ತಿ, ಅಸಹಿಷ್ಣುತೆ, ಮುಷ್ಕರಗಳಾವುವೂ ಆತಂಕಗಳಾಗಿ ಎದ್ದು ನಿಲ್ಲದಂತೆ ಮೂಡುವುದರಲ್ಲಿ ಸರಕಾರವು ಅತ್ಯಂತ ಜಯಶೀಲವಾಗಿದೆ. ಈ ಮಟ್ಟಿಗೆ ಈ ಕಾಲದಲ್ಲಿ ಇಂತಹ ಸಾರ್ಥಕತೆ ಮತ್ತು ಜನತಾ ಬೆಂಬಲ ದೊರಕಿಸಿಕೊಳ್ಳುವುದು ಬೇರಾವುದೇ ಕಡೆಯ ಯಾವ ಸರಕಾರಕ್ಕಾದರೂ ಅಸಾಧ್ಯವೆನ್ನಬಹುದು. ಮಧ್ಯವಾಗಿ ಭಾರತದಂತಹ ಸ್ಥಿತಿಯಿರುವ ಇತರ ದೇಶಗಳಲ್ಲಿ ಕಮ್ಯೂನಿಸ್ಟರು ಪ್ರಬಲರಾಗಿರುವಂತೆ, ಸಂತವರಿಗೆ ಜನಸಾಮಾನ್ಯರ ಬೆಂಬಲ ದೊರಕಿರುವಂತೆ ಭಾರತದಲ್ಲಾಗಿಲ್ಲವೆಂಬುದು ಸರಕಾರದ ಜನಪ್ರಿಯತೆಯ ನಿಜದ ಖಲೆ. ಪರಿಸ್ಥಿತಿಯು ಒತ್ತಡದ ನೆಲೆಯಿಂದ ಕಮ್ಯೂನಿಸ್ಟ್ ಹಾವಳಿ ಪ್ರಚ್ಛಲಿಸಬೇಕಾಗಿದ್ದ ವರುಷವಿದಾದರೂ ಅದಿಲ್ಲಿ ನೆಲೆ ಹಿಡಿಯಿತೆಂಬುದು ಗಣನೀಯ ವಿಚಾರ.

ಇಡೀ ಚರಿತ್ರೆಯಲ್ಲಿ, ಭಾರತವು ಹಿಂದೆಂದಾಗಲಿಲ್ಲದಂತಹ ಲೋಕನ್ಯಾಹೀ ಕೀರ್ತಿಯನ್ನು ೧೯೪೯ರಲ್ಲಿ ಗಳಿಸಿದೆ. ಜಾಗತಿಕ ರಂಗದಲ್ಲಿ ಭಾರತದ ಘನತೆ, ಗೌರವಗಳು ಈ ರೀತಿ ಹೆಚ್ಚಿದುದು ನವೋದಿತ ಸ್ವತಂತ್ರ ರಾಷ್ಟ್ರಕ್ಕಾದ ಮಹಾ ಲಾಭವೆನ್ನಲಡ್ಡಿಯಿಲ್ಲ.

ಜಾಗತಿಕ ಸಂಘಟನ ಕಾರ್ಯರಂಗದಲ್ಲೂ ಈ ವರುಷ ಭಾರತವು ವಿಶೇಷ ಸ್ಥಾನ ಮಾನಗಳನ್ನು ಗಳಿಸಿದೆ. ಭದ್ರತಾ ಕೌನ್ಸಿಲಿನ ಸದಸ್ಯತನವು ಅವಕ್ಕೆ ದೊರೆತಿದೆಯಲ್ಲದೆ, ಇತರ ಹಲವು ಸಮಿತಿಗಳ ಸದಸ್ಯತನ, ಅಧಿಕಾರ ಸ್ಥಾನ ಮತ್ತು ಮಧ್ಯಸ್ಥಿಕೆ ಗೌರವಗಳು ಲಭಿಸಿವೆ. ಪರದೇಶಗಳಲ್ಲಿರುವ ರಾಯಭಾರಿಗಳ ಮೂಲಕ ಸ್ವತಂತ್ರ ಭಾರತವು ಲೋಕ ಸೌಹಾರ್ದತಾ ಕಾರ್ಯವನ್ನು ಲಾಭದಾಯಕವಾಗಿ ನಡೆಸಿದೆ.

೧೯೪೯ ರಲ್ಲಾಗಿರುವ ಸರ್ವಪ್ರಥಮ ಅತಿ ಮುಖ್ಯ ಹಾಗೂ ಚಿರಸ್ಥಾಯೀ ಮಹತ್ಸಾಧನೆಯೆಂದರೆ ಜನತಾ ರಾಜ್ಯಭಾರತದ ನವರಾಜ್ಯ ಶಾಸನ ರಚನೆ. ಹಿಂದಿನ ಎರಡು ವರ್ಷಗಳಲ್ಲಿ ಮೂಡುತ್ತಾ ಬಂದ ಈ ಅಗಾಧ ಕಾರ್ಯವನ್ನು ಈ ವರುಷ ಭರದಿಂದ ಸಾಗಿಸಿ, ನವಂಬರ್ ೨೬ ರಲ್ಲಿ ಪೂರ್ಣಗೊಳಿಸಲಾಯಿತು. ೧೯೫೦ ನೇ ಜನವರಿ ತಾ. ೨೬ ರಲ್ಲಿ ಅಸ್ತಿತ್ವಕ್ಕೆ ಬರಲಾಗುವಂತೆ ಭಾರತ ಜನತಾ ರಾಜ್ಯ. ಶಾಸನದ ಅಂಗೋಪಾಂಗಗಳು ರೂಪುಗೊಂಡವು. ಈ ಶಾಸನವೆಂಬುದು ಸ್ವತಂತ್ರ ಭಾರತವು ಬಾಳುವೆಯ ಪ್ರಯಾಣಕ್ಕೆ ಕೊಳ್ಳುವಂತೆ ಅದಕ್ಕೆ ತೊಡಿಸಿರುವ ಕವಚ ಭೂಷಣ ಮತ್ತು ಉಪಕರಣಗಳು. ಈ ರೀತಿಯಾರೀ ಕಾರ್ಯ ಎಲ್ಲಾ ವಿಧಾನಗಳಿಂದಲೂ ನಡೆದು ಒಂದು ಪೂರ್ಣತೆಗೆ ಬಂದ ವರ್ಷ ೧೯೪೯.

ಈ ರೀತಿ ಸ್ವತಂತ್ರ ಭಾರತದಲ್ಲಿ ಈ ವರುಷ ಪೂರ್ಣಗೊಳ್ಳುವವರೆಗೂ ಕ್ರಮಶಃ ಆಗುತ್ತಾ ಬಂದ ಕಾರ್ಯಗಳೆಲ್ಲವೂ ಹೆಚ್ಚಿನಂಶ ಮಂಥಾಗದವುಗಳೇ ಹೊರತು ಒಳಗಡೆಯವುಗಳಲ್ಲ. ರಾಷ್ಟ್ರಪುರುಷನ ಆಂಗೋಪಾಂಗ ನುಕ್ಕು ನೇಪಥೂಷಣಗಳಿಗೆ ಸಂಬಂಧಿಸಿದವು ಹೊರತು ಅನ್ನ ಕೋಶಕ್ಕಿಷ್ಟೊಂದು ಸಂಬಂಧಪಟ್ಟವುಗಳಲ್ಲ. ರಾಜಕೀಯತ ಸ್ವಗೃಹ ಮತ್ತು ಹೊರ ಸಂಬಂಧಗಳ ಪಟ್ಟಿನೆ ನಡೆದಂತಹ ಪ್ರಗತಿಯು ರಾಷ್ಟ್ರದೊಳಗಿನ ಆರ್ಥಿಕ, ಸಾಮಾಜಿಕ ರಂಗದಲ್ಲಿ ಅಡಗಿಲ್ಲ.

ಲೋಕವ್ಯಾಪೀ ಕೀರ್ತಿ ಗಳಿಸಿದುದು ಜಯಶೀಲ ರಾಜ್ಯಸ್ಥಾಪನೆ ತಯಾರಿಸಿಕೊಂಡುದು ಶಂಸ್ಥೀ ಏರುತಗ್ಗುಗಳನ್ನು ಸಮ ಮಟ್ಟಕ್ಕೆ ತಂದುದು, ಈ ಆಕಾರಾಡಂಬರಗಳಿಗಾಗಿ ಹಿಗ್ಗುವಾಗ ಒಳಗಡೆಯ ದಾರಿದ್ರ್ಯ, ಹಸಿವು ಪಿಡಿತ ಸೈತ್ತು ಜೀವನಾವಶ್ಯಕತೆಗಳ ಅಸ್ತವ್ಯಸ್ತತೆ ಹಾಗೂ ಅಸಮಾನತೆ, ಅಭ್ಯಂತರಗಳೀವರೆಗೂ ಹೀಗೆಯೇ ಉಳಿದುಕೊಂಡಿವೆಯೆಂದು ಕಣ್ಣಿಗೆ ಕಾಗಿದೆ. ಈ ವರುಷದೊಂದಿಗೆ ಅಂತ್ಯಗೊಳ್ಳುವ ಈ ವರೆಗಿನ ಅವಧಿಯು, ಹೊಸ ಸಾಪತ್ತುಗಳನ್ನು ನಿವಾರಿಸಿಕೊಂಡು ಸಾಕಾರ ಮತ್ತು ಯಶಸ್ವಾಧಸೆಗೇನೇ ಪೊಸ ಲಿಟ್ಟುದೆಂದು ಭಾವಿಸಿ, ಬರುವ ವರುಷದಿಂದ ಒಳಗಡೆಯ ವ್ಯವಸ್ಥೆಯು ಅವಧಿಯಂರಂಭವೆಂದು ನೆನಸಿ ಕಾರ್ಯಕ್ಕೆ ತೊಡಗಿದರೆ ಮಾತ್ರ ಎಲ್ಲವೂ ಸಾರ್ಥಕ.

೧೯೫೦ ರಲ್ಲಿ ಏನೆಲ್ಲ ಆಗಬಹುದು? ಆಗಬೇಕು?

ಜನವರಿ ೨೬ರಲ್ಲಿ ಹೊಸ ರಾಜ್ಯಸ್ಥಾಪನೆಯು ಜಾರಿಯಲ್ಲಿ ಬರುವ ಸಂಭ್ರಮೋತ್ಸವ ನಡೆಯಲಿದೆ. ೧೯೫೦ನೇ ಜನವರಿಯಿಂದಲೂ ರಾಷ್ಟ್ರದ ಪಾಲಿನ ಒಂದು ಪ್ರಾಮುಖ್ಯ ದಿನವಾಗಿ ಆಚರಿಸಲ್ಪಡುತ್ತಾ ಬಂದಿರುವ ೨೬ನೇ ಜನವರಿಗೆ ೧೯೫೦ರಿಂದ ಹೊಸ ಮಹತ್ವ ಬರಲಿದೆ. ಜನ ಸಾಮಾನ್ಯರ ನಿತ್ಯ ಜೀವನದಲ್ಲಿ ಅನುಭವಕ್ಕೆ ಬರುವಂತಹ ಅದ್ಭುತ ಮೂರ್ತಿವಾವುದೂ ೧೯೫೦ನೇ ಜನವರಿ ೨೬ರಿಂದ ತೋರಿಬರಲಾರದಾದರೂ ಅದು ವರೆಗಿನ ಶಾಸನಗಳ ಸ್ಥಾನದಲ್ಲಿ ಅಂದು ಹೊಸ ಶಾಸನಗಳು ನಿಲ್ಲಲಿವೆ. ಬದಲಾವಣೆಯ ವಿಶೇಷ ಪರಿಚಯವು ಜನ ಸಾಮಾನ್ಯರಿಗಾಗಬೇಕಾದರೆ ಹೊಸ ಶಾಸನವನ್ವಯ ಹೊಸ ರೀತಿಯಿಂದ ಪ್ರೌಢ ಮತದಾರರೆಲ್ಲರಿಂದ ಮಹಾ ಚುನಾವಣೆಗಳಾಗುವಾಗಲೇ!

ಈಗಿನ ಅಂದಾಜಿನಂತೆ ೧೯೫೦ನೇ ಅಂತ್ಯಭಾಗ ಅಥವಾ ೧೯೫೧ನೇ ಆದಿಭಾಗದಲ್ಲಿ ಹೊಸ ಮಹಾ ಚುನಾವಣೆಗಳು ಜರಿಗೆಯಲಿವೆ. ತೀರಾ ಸಮೀಪವೆಂದರೆ ೧೯೫೧ರಲ್ಲೇ ನಡೆಯಬಹುದು. ಆನುರೀಕ್ಷಿತ ವಿಶೇಷ ವಿದ್ಯಮಾನಗಳೊದಗಿದರೆ ಮಕ್ಕೂ ಹಿಂದೆ ಹೋಗಬಹುದು. ಅದು ರೆ ಸದ್ಯ ಸ್ಥಿತಿಯಲ್ಲಿ ಅಂತಹದೇನೂ ನಡೆಯುವ ಸಂಭವವಿಲ್ಲವೆಂದು ತೋರುತ್ತಿರುವುದರಿಂದ ೧೯೫೧ನೇ ಪೂರ್ವಾವಧಿಯೊಳಗೆ ಮಹಾ ಚುನಾವಣೆಗಳಾಗುವವೆಂದೂ ಕಟ್ಟಿಕೊಳ್ಳಬಹುದು.

ಹೇಗಿದ್ದರೂ ೧೯೫೦ರ ಉತ್ತರಾರ್ಧವು ಚುನಾವಣಾ ಪ್ರಚಾರ ಮತ್ತು ಆಂದೋಲನಗಳ ಅವಧಿಯೂಗಲಿದೆ. ಇಗಲೇ ಚುನಾವಣಾ ಡಂಗುರ ಸ್ವರ ಕೇಳಿ ಬರಲಿದೆ; ಉಮೇದ್ವಾರಿಕೆ ಹುರುಪು ನೋಟ ಕಂಡುಬರಲಿದೆ.

೧೯೫೦ರ ಆದಿಭಾಗದಿಂದ ಮಧ್ಯಾನ್ಹದವರೆಗೆ ಬಹುಶಃ ಕಾಶ್ಮೀರದ ಪ್ರಶ್ನೆ ಮತ್ತು ಭಾರತ ಪಾಕಿಸ್ತಾನಗಳೊಳಗಿನ ವಿವಾದಗಳು ಅಖಿಲ ರಾಷ್ಟ್ರದ ಲಕ್ಷ್ಯವನ್ನು ವಿಶೇಷರೀತಿಯಿಂದ ಆಕರ್ಷಿಸುವಷ್ಟು ಬೆಳೆಯಬಹುದು. ಕಾಶ್ಮೀರದಲ್ಲಿ ಹತ್ತಿಕ್ಕಿ ಒಂಭತ್ತರಷ್ಟು ಸಂಧಾನದಾತೆಯಿದೆಯೂದರೂ, ಗಂಡು ಹಾರಾಟ ಪುನಃ ಆರಂಭಿಸುವದೂ ತಳ್ಳಂಶದಷ್ಟಿದೆ.

ಆಂತೂ ೧೯೫೦ರಲ್ಲೂ ಚಿಕಿತ್ಸೆ ಮಾಡಿಸಿಕೊಳ್ಳಬೇಕಾದ ನೋಲ್ಮೈಯ್ಯ ಬೊಕ್ಕೆಗಳು ಹಲವಿರಬಹುದು. ಅಂತೆಯೇ ಚುನಾವಣೆಯಂತಹ ಆಕರ್ಷಣೆಗಳೂ ಬಾಬುಹುದು. ಸ್ವತಂತ್ರ ಭಾರತದಲ್ಲಿ ಒಂದಲ್ಲೊಂದು ವಿಧಾನದಿಂದ ಹೃದಯೋದ್ಗಾರ ಜಕ್ಕೆ ಅಥವಾ ಹೃದಯ ದ್ರಾವಕ ಘಟನೆಗಳಿದ್ದ ೧೯೫೦ನೇ ಮತ್ತು ೧೯೫೧ನೆಯಂತೆಯೇ ೧೯೫೦ ಕೂಡಾ ಒಂದು ರೀತಿಯಿಂದ ಆಕರ್ಷಣೀಯವೇ ಆಗಲಿದೆ. ಅಂತಹ ಹೊಸಾಕರ್ಷಣೆಯಿಲ್ಲದೆ ಕಳೆದು ಹೋದುದೆಂದರೆ ಇವುಗಳೆಡೆಯ ೧೯೫೦ ನೂನ್ಯ.

ಒಳಗಿನ ಆಕಾರ ವ್ಯವಸ್ಥೆಯು ಪಟ್ಟಿಗೆ, ಜಿಡ್ಡುಪುಳ್ಳ ಹಾಗೂ ಕಾವ್ಯಉಳ್ಳ ಪ್ರಶ್ನೆಯಾಗಿ ೧೯೫೦ರಲ್ಲಿ ಕಾಣಿಸಿಕೊಳ್ಳುವಂತಹದು ಈ ಪ್ರಶ್ನೆಗಳು ಪ್ರಾಂತ್ಯಗಳ ಚಿಂತನೆ. ಈ ಸಂಬಂಧದಲ್ಲೆಂತಹ ಬಿಸಿಯೆದ್ದರೂ ಅದೆಲ್ಲಿಯೂ ಹೆಚ್ಚು ವಿಸರಣೆ ಆ ವರುಷದಲ್ಲೇ ಒಂದು ಸರ್ವಸಮ್ಮತ ಶಾಂತಸ್ಥಿತಿನಿರ್ಮಾಣಗೊಳ್ಳುವುದು ಖಂಡಿತವೆನ್ನಬಹುದು.

೧೯೫೦ರಲ್ಲಿ ವಿಶೇಷವಾಗಿ ಆಗಬೇಕಾದುದು ಜನತಾ ತಯಾರೀ ಶಿಕ್ಷಣ. ಪ್ರೌಢರೆಲ್ಲರಿಗೂ ಮತಾಧಿಕಾರ ಬಂದಿರುವುದರಿಂದ ಅವರಿಗೆ ಜ್ಞಾನದಾನ ಮಾಡು

(ಲನೇ ಪುಠ ನೋಡಿ)

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್.

ಮುಖ್ಯ ಖಜೇರಿ:— ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲ ಖಾನ್. ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ಇವ್ಯಾ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಆರ್ಗನೈಜರ್
ದಕ್ಷಿಣ ಕೊಡಗು, ಪೊನ್ನಂಪೇಟೆ.

ಆರ್ಗನೈಜರ್
ಉತ್ತರ ಕೊಡಗು, ಮಡಿಕೇರಿ.

ಅಥವಾ
ಯಂ. ಯು. ಅಚ್ಚಣ್ಣ,
ಏಜೆನ್ಸಿ ಸುಪರಿಂಟೆಂಡೆಂಟ್,
ಮಡಿಕೇರಿ, ಕೊಡಗು.

ಅಥವಾ
ಎಂ. ಎ. ಬೆಳ್ಯಪ್ಪ,
ಬ್ರಾಂಚ್ ಸೆಕ್ರೆಟರಿ,
ಹಂಪನಕಟ್ಟಾ, ಮಂಗಳೂರು.

ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಮುಖಾಂಶಗಳು.

ಹೊಸ ಉದ್ಯಮ ರೂ. .... 6,13,00,000 ಮೊದಲಿದೆ.
ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ. .... 27,73,00,000 ,,
ಒಟ್ಟು ನಿಧಿ. ರೂ. .... 8,30,00,000 ,,
ಸ್ಥಾಪಿತವಾದಂದಿನಿಂದ ಪಾವತಿಯಾದ ಕ್ಲೈಮುಗಳು 10,96,00,000 ,,
1,28,000 ಕ್ಕೆ ಮೀರಿದ ತೃಪ್ತಿ ಪಡೆದ ಪಾಲಿಸಿದಾರರು.

ಶಕ್ತಿ. ಸೇವೆ ಭದ್ರತೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

ರೋಶನ್‌ಲಾಲ್, ಜನರಲ್ ಮೇನೇಜರ್.

ಪ್ರಧಾನ ಕಛೇರಿ: ಎಂಪೈರ್ ಹೌಸ್, ಹಾರ್ನ್‌ಬಿ. ರೋಡ್, ಫೋರ್ಟ್, ಬೊಂಬೆ.

ಅಂಗ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,

ಫೇಜರ್‌ಪೇಟೆ.

ಬೇಕಾಗಿದ್ದಾರೆ.

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಬಿದ್ದು ಮಣ್ಣುಪಾಲಾಗಿ ಹೋಗುತ್ತಿರುವ ಮೂಳೆಗಳನ್ನು ಶೇಖರಿಸಿಕೊಡಲು ಪ್ರತಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಈ ಏಜೆಂಟರುಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ.

ನೇಮಕವಾದ ಏಜೆಂಟರುಗಳು ಕಂಪೆನಿಯಿಂದ ಗೊತ್ತಾದ ಸ್ಥಳಕ್ಕೆ ಮೂಳೆಗಳನ್ನು ಸಾಗಿಸಿ ಕೊಟ್ಟಲ್ಲಿ ಮಣ ಒಂದರ ರೂ. 0–12–0 ಯಂತೆ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಫೇಜರ್‌ಪೇಟೆ,
12-1-49.

ಕೆ. ಕೆ. ತಿಮ್ಮಯ್ಯ,
ಮೇನೇಜಿಂಗ್ ಡೈರೆಕ್ಟರ್.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟ್ಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. .32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245 ರವರೆಗೆ.
2. .32 ರಿವಾಲ್ವರುಗಳು (Revolvers) ,, 262 ,, 274 ,,
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make) ಕ್ರಯ ರೂ. 627–5–0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4–10–0
6. 12, 16, 20ನೇ ನಂಬರಿನ ಕೋವಿಗಳ ತೋಟಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52–20

CRESCENT

FOR PROTECTION AND SERVICE.



It is best to represent and insure with

The **CRESCENT** Insurance Co., Ltd,

H: O: BOMBAY.] *[Established 1919.*

For particulars write to:

Sri B. A. Poovaiah *Organiser* *Pollibetta, Coorg.*

or

The Branch Manager, *22 B. Mahatma Gandhi Road, Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿಸಲ್ಪಟ್ಟಿತು.

ಅಧಿಕೃತ ಶೇರು ಭಂಡವಾಳ ರೂ. 10,00,000.
ವಸೂಲಾದ ಶೇರು ಮೊಬಲಗು ರೂ. 1,65,000.
ಕ್ಷೇಮನಿಧಿ ರೂ. 50,000.

ಈ ಬ್ಯಾಂಕಿನಿಂದ ಪೆಜ್ಜಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ, ಬೆಳ್ಳಿ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೆಸಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಜೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾನ್ಚಿ.

(೭ನೇ ಪುಠದಿಂದ ಸಾಗಿದ್ದು)

ವ ಹಾಗೂ ಸಂಘಟಿಸುವ ಕೆಲಸ ನಡೆಯಬೇಕಾಗಿದೆ— ಜನತಾರಾಜ್ಯದ ಜಯಾಪಜಯ, ಸಾರ್ಥಕತೆ, ನಿರರ್ಥಕತೆಗಳು ಈ ತಳಪಾಯವನ್ನೇ ಆಧರಿಸಿಕೊಂಡಿವೆ.

ಹೊಸ ಯುಗವನ್ನು ನಿರ್ಮಿಸತಕ್ಕ ಮತದಾರರ ಮನಸ್ಸು ಮಾತ್ರ ಹಳೆಯದೇ ಆಗಿದ್ದರೆ, ಬೇರಾವುದು ಹೊಸತಾದರೂ ಹೊಸ ಸ್ಥಿತಿ ಮೂಡುವಂತಿಲ್ಲ. ಆದ್ದರಿಂದ ಎಂತಹ ಮೂರ್ಖಾಟ ಬರಬೇಕೆಂದಿದ್ದರೂ ಎಲ್ಲರ ಲಕ್ಷ್ಯವೂ ಬೀಳಬೇಕಾದುದು ಈಗ ಜನತೆಯ ಕಡೆಗೇನೇ.

೧೯೫೦ ಜನತಾ ಶಿಕ್ಷಣ ಯುಗವಾಗಿ ಆರಂಭವಾಲಿ— ಅಂದರೇನೇ ೧೯೫೦ರಲ್ಲಿ ಅಸ್ತಿತ್ವಕ್ಕೆ ಬರುವ ಜನತಾ ರಾಜ್ಯವೂ ಸಾರ್ಥಕವಾಗುವದು. ಭಾರತೀಯ ಜನಸಾಮಾನ್ಯರ ಬುದ್ಧಿಗೀಗಲೂ ಅಂಧಶ್ರದ್ಧೆ, ಅಜ್ಞಾನ, ಆಹಕ್ಷತೆಯ ಅಂಧಕಾರ ಕವಿದಿದೆ. ಇದುವರೆಗಿದರ ಮುಂಭಾಗಕ್ಕೆ ಮಾತ್ರ ಪ್ರಕಾಶ ಬಿದ್ದಿದೆ ಹೊರತು, ಒಳಗಡೆಗೆ ಬಿದ್ದಿಲ್ಲ. ಈಗ ಮುಂದಾಗಿ ಈ ಕತ್ತಲೇ ಭಾಗವನ್ನು ಬೆಳಗಿಸಿಕೊಳ್ಳಬೇಕು.

ಎಚ್ಚೆತ್ತ ಹಾಗೂ ತುಂಬಿದ ಬುದ್ಧಿ ಹೃದಯಗಳಿಂದ ಜನತೆಯು ೧೯೫೦ನ್ನು ಪ್ರವೇಶಿಸಿದರೆ ಜನತಾರಾಜ್ಯ ಸಫಲವಾಗಿ ಬಹುದು. ಜನತಪ್ಪಿ ಬೀಳದಿದ್ದರೆ ಕಾಲ ತಪ್ಪು ಮಾಡದು. ಸದ್ವಿನಿಯೋಗಿಸಲ್ಪಡದ ಕಾಲವು ಮೂಡದೆ ಬಾಕಿಬಿಟ್ಟ ಸತ್ಪಂಗತಿಗಳನ್ನು ಬರುವ ವರ್ಷವು ನೆರವೇರಿಸಿ ಕೊಡಲಿ. "ನವಯುಗ"

೧೯೫೦ ಶುಭವರುಷ.

೧೯೫೦ ಜಯಪ್ರದವಾಗಲಿ. ೧೯೪೯ರಲ್ಲಿ ಬಿದ್ದ ಆಸ್ತಿವಾರದ ಮೇಲೆ ೧೯೫೦ ಭವ್ಯ ಭವ್ಯ ಕಟ್ಟಡವನ್ನೇರಿಸಲಿ. ಈ ವ

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.